# ಬಾಗಲಕೋಟ ವಿಶ್ವವಿದ್ಯಾಲಯ,

## ಜಮಖಂಡಿ-587301

# ವಿದ್ಯಾಮಂಡಳ ವಿಭಾಗ

# 2023-24 ನೇ ಶೈಕ್ಷಣಿಕ ಸಾಲಿನ ಸ್ನಾತಕ ಕೋರ್ಸ್‌ಗಳ (UG) ಪ್ರವೇಶ ನಿಯಮಾವಳಿ ಹಾಗೂ ಸಂಬಂಧಿಸಿದ ಸುತ್ತೋಲೆಗಳು

# ಪರಿವಿಡಿ


| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 1. | ಪರಿಷ್ಕೃತ ವೇಳಾ ಪಟ್ಟಿ (ಅನುಬಂಧ – 1) | 3 |
| 2. | ರಾಷ್ಟ್ರೀಯ ಶಿಕ್ಷಣ ನೀತಿ–2020ರ ಕುರಿತು ಮುಖ್ಯಾಂಶಗಳು (ಅನುಬಂಧ–2) | 4–7 |
| 3. | ಸ್ನಾತಕ ಎಲ್ಲಾ ಕೋರ್ಸ್‌ಗಳ ನೊಂದಣಿ ಮತ್ತು ಇತರೆ ಶುಲ್ಕದ ಆಕರಣೆ, ಪ್ರವೇಶ ಅವಧಿ: ದಂಡ ರಹಿತ ಪ್ರವೇಶ, ದಂಡ ಸಹಿತ ಪ್ರವೇಶ ಮತ್ತು ಹೆಚ್ಚುವರಿ ದಂಡ ಪ್ರವೇಶ, ಪ್ರವೇಶ ಮಿತಿ, ವರ್ಗಾವಣೆ ಮೇಲೆ ಪ್ರವೇಶ ಪರೀಕ್ಷಾ ಅರ್ಜಿ ಸಲ್ಲಿಸುವುದು ಹಾಗೂ ಇತರೆ ನಿಯಮಗಳು (ಅನುಬಂಧ–3) | 8–15 |
| 4 | 2023–24ನೇ ಶೈಕ್ಷಣಿಕ ಸಾಲಿಗಾಗಿ ಹೊರಡಿಸಿದ ಸುತ್ತೋಲೆಗಳು (ಅನುಬಂಧ–4 ರಿಂದ  ಅನುಬಂಧ–7) | 17–22 |
| 5 | Government Notification, Proceeding and UGC Notifications.<br>(ಅನುಬಂಧ–08 ರಿಂದ ಅನುಬಂಧ–10) | 23–25 |
| 7 | ಹೈದ್ರಾಬಾದ್‌ಕರ್ನಾಟಕ ವಿದ್ಯಾರ್ಥಿಗಳ ಮೀಸಲಾತಿ ಸೌಲಭ್ಯ ಕುರಿತು. (ಸುತ್ತೋಲೆ) (ಅನುಬಂಧ–11) | 26 |
| 8 | ಹಾಜರಾತಿ ವರದಿ ಕುರಿತು ಸುತ್ತೋಲೆ (ಅನುಬಂಧ–12) | 27 |
| 9 | ಅನಧೀಕೃತ ಪ್ರವೇಶ ಕುರಿತು ಸುತ್ತೋಲೆ (ಅನುಬಂಧ–13) | **28** |
| 10 | ವಿವಿಧ ಸ್ನಾತಕ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ನಮೂನೆಗಳ ಅನುಬಂಧಗಳು ಈ ಕೆಳಗಿನಂತಿವೆ: (ಅನುಬಂಧ–14ರಿಂದ  ಅನುಬಂಧ–20)<br>1. Statement of Admitted Students.<br>2. Category wise Cast/Sub-Cast Students Details<br>3. Penal wise abstract<br>4. Foreign Students Admitted.<br>5. Physical Handicapped Students.<br>6. Eligibility Certificate List.<br>7. Other University (Change of University) Admitted Students List.<br>8. Re admitted students Details.<br>9. Diploma in Commercial Practice (3 Semester) Students Details | 29–35 |
| 11 | 2023-24 ನೇ ಶೈಕ್ಷಣಿಕ ಸಾಲಿನ ವಿಷಯಗಳ ಸಮೂಹಗಳನ್ವಯ ಪ್ರವೇಶ<br>(ಅನುಬಂಧ -21-24 | 36–39 |

# ಬಾಗಲಕೋಟ ವಿಶ್ವವಿದ್ಯಾಲಯ

(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
ಮುಧೋಳ ರಸ್ತೆ, ಜಮಖಂಡಿ-587301 ಬಾಗಲಕೋಟೆ ಜಿಲ್ಲೆ

# Bagalkot University

(State Public University of Govt. of Karanataka)
Mudhol Road, Jamkhandi-587301 Dist: Bagalkote

**Mail ID** : **bgkujkd@gmail.com**
**Website: https:// bgku.ac.in** **ಕುಲಸಚಿವರ ಕಾರ್ಯಾಲಯ** **Tel No:** (08353)295123, 295124


ಅನುಬಂಧ – 1

BGKUJ/RO/2023-24/72 Date:30/05/2023

## ಪರಿಷ್ಕೃತ ವೇಳಾಪಟ್ಟಿ

2023–24 ನೇ ಸಾಲಿನ ಪ್ರಥಮ ಸೆಮಿಸ್ಟರ್ ನ ಸ್ನಾತಕ (UG)ಕೋರ್ಸುಗಳ ಶೈಕ್ಷಣಿಕ ವೇಳಾಪಟ್ಟಿ (ಸೆಮಿಸ್ಟರ್ ಪದ್ಧತಿ)

ಉಲೇಖ: 1. ಕರ್ನಾಟಕ ಸರ್ಕಾರದ ಆದೇಶ ಶಂ: ಇಡಿ 80 ಯುಎನ್ಇ 2023.ಬೆಂಗಳೂರ.ದಿನಾಂಕ: 23–05–2023
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:30/05/2023
ಟಿಪ್ಪಣಿ: ಸದರಿ ಶೈಕಣಿಕ ವೇಳಾಪಟ್ಟಿಯನ್ನು ಮೇಲಿನ ಉಲ್ಲೇಖಗಳ ಆದೇಶದ ಅನುಗುಣವಾಗಿ ಸದ್ದಪಡಿಸಲಾಗಿದೆ

| ಕ್ರ.ಸಂ | ವಿವರ | ದಿನಾಂಕ (1 ಸೆಮೆಸ್ಟರ್) Online Admission & related Academic works through UUCMS |
|---|---|---|
| 1 | ಸ್ನಾತಕ ಕೋರ್ಸುಗಳ ಸೆಮಿಸ್ಟರ್‌ವಾರು ಪ್ರವೇಶ ಪ್ರಕ್ರಿಯೆ ಪ್ರಾರಂಭದ ಅವಧಿ (ಪ್ರಥಮ ಸೆಮಿಸ್ಟರ್) | 01–06–2023 |
| 2 | ದಂಡರಹಿತವಾಗಿ ಪ್ರವೇಶ ಪಡೆಯುವ ಕೊನೆಯ ದಿನಾಂಕ | 15.07.2023 |
| 3 | 2023–24 ನೇ ಶೈಕ್ಷಣಿಕ ಸಾಲಿನ 1ನೇ ಸೆಮಿಸ್ಟರ ತರಗತಿಗಳು ಪ್ರಾರಂಭ | 17.07.2023 |
| 4 | ರೂ.1.000/–ರಂತೆ ದಂಡದೊಂದಿಗೆ ವಿದ್ಯಾರ್ಥಿ ಪ್ರವೇಶ ಪಡೆಯಲು ಕೊನೆಯ ದಿನಾಂಕ | 31.07.2023 |
| 5 | 2023–24ನೇ ಸಾಲಿನ ಪ್ರಥಮ ಸೆಮಿಸ್ಟರ್ ಪ್ರವೇಶಯಾದಿಯಲ್ಲಿ ಹೆಸರು ತಿದ್ದುಪಡಿ/ವಿಷಯ ಬದಲಾವಣೆಯ ದಿನಾಂಕ (ಕೊನೆಯ ಘಳಿಗೆ ಹಾಗೂ ಅವಧಿ ಮೀರಿ ಬಂದ ಅರ್ಜಿಗಳನು ಪರಿಗಣಿಸುವುದಿಲ್ಲ) | 16.08.2023 |
| 6 | 1ನೇ ಸೆಮಿಸ್ಟರನ ದಂಡರಹಿತ ಮತ್ತು ದಂಡಸಹಿತ ಕೋರ್ಸವಾರುಪ್ರವೇಶ ಪಡೆದ ವಿದ್ಯಾರ್ಥಿಗಳ ಯಾದಿಯನ್ನು UUCMSನ ನಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯರಿಂದ ಅನುಮೋದನೆ ನೀಡುವ ಕೊನೆಯ ದಿನಾಂಕ | 30.09.2023 |
| 7 | 1ನೇ ಸಿಮಿಸ್ಟರ್‌ನ ದಂಡರಹಿತ ಮತ್ತು ದಂಡಸಹಿತ ಕೋರ್ಸವಾರು ಪ್ರವೇಶ ಪಡೆದ ವಿದ್ಯಾರ್ಥಿಗಳ ಯಾದಿಯನ್ನು ಪರಿಶೀಲಿಸಿಕೊಳ್ಳುವುದು (Reconcillation) | 03.10.2023 ರಿಂದ 11.11.2023 |
| 8 | 1ನೇ ಸೆಮಿಸ್ಟರ ತರಗತಿಗಳ ಕೊನೆಯ ದಿನಾಂಕ | 18.11.2023 |
| 9 | 1ನೇ ಸೆಮಿಸ್ಟರನ ಪ್ರಾಯೋಗಿಕ ಪರೀಕ್ಷೆ/ ಮಧ್ಯಮಾವದಿ ರಜೆ/ಲಿಖಿತ ಪರೀಕ್ಷೆ/ಮೌಲ್ಯಮಪನ ಇತ್ಯದಿ/ಫಲಿತಾಂಶ ಪ್ರಕಟಣೆ | 19.11.2023 ರಿಂದ 15.01.2024 |
| 10 | 2.ನೇ ಸೆಮಿಸ್ಟರ್ ಸ್ನಾತಕ ಕೋರ್ಸಗಳ ತರಗತಿಗಳ ಪ್ರಾರಂಭದ ದಿನಾಂಕ | 16.01.2024 |
| 11 | 2.ನೇ ಸೆಮಿಸ್ಟರ್ ಸ್ನಾತಕ ಕೋರ್ಸಗಳ ತರಗತಿಗಳ ಕೊನೆಯ ದಿನಾಂಕ | 11.05.2024 |
| 12 | 2.ನೇ ಸೆಮಿಸ್ಟರನ ಮಧ್ಯಮಾವದಿ ರಜೆ/ಲಿಖಿತ ಪರೀಕ್ಷೆ/ಪ್ರಾಯೋಗಿಕ ಪರೀಕ್ಷೆ/ಮೌಲ್ಯಮಾಪನ ಇತ್ಯಾಧಿ ಫಲಿತಾಂಶ ಪಕಟಣೆ | 12.05.2024 ರಿಂದ 29.06.2024 |

**ಸೂಚನೆಗಳು:**

1..ಮೇಲೆ ನಮೂದಿಸಿದ ದಿನಗಳ ರಜೆ ಎಂದು ಘೋಷಿಸಿದಲ್ಲಿ ತದನಂತರದಲ್ಲಿ ದಿನವನ್ನು ಪರಿಗಣಿಸುವುದು
2.ಪರೀಕ್ಷೆಗಳ ವೇಳಾಪಟ್ಟಿಯನ್ನು ಕುಲಸಚಿವರು(ಮೌಲ್ಯಮಾಪನ) ಬಾಗಲಕೋಟ ವಿಶ್ವವಿದ್ಯಾಲಯ ಇವರು ಕಾಲಕಾಲಕ್ಕೆ ಪ್ರಕಟಿಸುವುದು
3.ಸರಕಾರ/ವಿಶ್ವವಿದ್ಯಾಲಯ ಮುಂದಿನ ದಿನಗಳಲ್ಲಿ ಈ ಶೈಕ್ಷಣಿಕ ವೇಳಾಪಟ್ಟಿಯನ್ನು ಒಂದು ವೇಳೆ ಬದಲಾವಣೆ ಮಾಡಿದಲ್ಲಿ ಇದು ಬದಲಾವಣೆ ಒಳಪಡಬಹುದು

**ಕುಲಸಚಿವರು**
ಬಾಗಲಕೋಟ ವಿಶ್ವವಿದ್ಯಾಲಯ ಜಮಖಂಡಿ

**ಇವರಿಗೆ.**

1.ಕುಲಸಚಿವರು(ಮೌಲ್ಯಮಾಪನ) ಬಾಗಲಕೋಟ ವಿಶ್ವವಿದ್ಯಾಲಯ ಜಮಖಂಡಿ
2 ಬಾಗಲಕೋಟ ವಿಶ್ವವಿದ್ಯಾಲಯ ಜಲ್ಲೆಗಳಲ್ಲಿನ ಸ್ನಾತಕ (UG)ಕೋರ್ಸಗಳನ್ನು ನಡೆಸುತ್ತಿರುವ ಎಲ್ಲ ಮಹಾವಿದ್ಯಾಲಯಗಳ ಪಾಂಶುಪಾಲರುಗಳಿಗೆ

# ಬಾಗಲಕೋಟ ವಿಶ್ವವಿದ್ಯಾಲಯ

(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
**ಮುಧೋಳ ರಸ್ತೆ, ಜಮಖಂಡಿ–587301 ಬಾಗಲಕೋಟೆ ಜಿಲ್ಲೆ**

Bagalkot University
(A State Public University of Govt. of Katakana)
Mudhol Road, Jamkhandi-587301 Dist: Bagalkote

**Mail ID** : **bgkujkd@gmail.com**
**Website: https:// bgku.ac.in**

**ಕುಲಸಚಿವರ ಕಾರ್ಯಾಲಯ** **Tel No:** (08353)295123, 295124


BGKUJ/RO/2023-24/ Date:01/06/2023

## ರಾಷ್ಟ್ರೀಯ ಶಿಕ್ಷಣ ನೀತಿ–2020ರ ಕುರಿತು ಮುಖ್ಯಾಂಶಗಳು ಹಾಗೂ ಪ್ರವೇಶ ಪ್ರಕ್ರಿಯೆ ಪಾಲಿಸಬೇಕಾದ ನಿಯಮಗಳು

1. ಸ್ನಾತಕ ಪದವಿಗಳಿಗೆ ಅನ್ವಯವಾಗುವಂತೆ ಈ ಕೆಳಕಂಡ ಸೂಚನೆಗಳನ್ನು ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲಾ ಸಂಯೋಜಿತ ಘಟಕ ಸ್ವಾಯತ್ತ ಮಹಾವಿದ್ಯಾಲಯಗಳು ತಪ್ಪದೆ ಪಾಲಿಸಲು ಸೂಚಿಸಲಾಗಿದೆ.
2. ಮಹಾವಿದ್ಯಾಲಯಗಳ ಪ್ರಾಂಶುಪಾಲರು /ಮುಖ್ಯಸ್ಥರು ವಿಶ್ವವಿದ್ಯಾಲಯವು ನಿಗದಿಪಡಿಸಿದ 2023–24ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ಅಧ್ಯಾಪಕರುಗಳ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ಬರುವಂತೆ ಕಡ್ಡಾಯವಾಗಿ ಪ್ರಕಟಿಸಬೇಕು.
3. ಈಗಾಗಲೇ ಪರಿಚಲಿಸಲಾಗಿರುವ 2023–24ನೇ ಶೈಕ್ಷಣಿಕ ವೇಳಾಪಟ್ಟಿಗನುಗುಣವಾಗಿ ನಿಗದಿತ ಅವಧಿಯೊಳಗೆ ಎಲ್ಲಾ ತರಗತಿಗಳ ಪ್ರವೇಶಗಳನ್ನು UUCMS ಮಾರ್ಗಸೂಚಿಗಳನ್ವಯ ಪೂರ್ಣಗೊಳಿಸಬೇಕು.
4. ವಿಶ್ವವಿದ್ಯಾಲಯದ ನಿಯಮಗಳನುಸಾರ ಬೋಧನೆ ಹಾಗೂ ಪರೀಕ್ಷೆಗಳನ್ನು ನಡೆಸಬೇಕು.
5. ನಿಗದಿತ ಕೊನೆಯ ದಿನಾಂಕದ ನಂತರ ಪ್ರವೇಶಗಳನ್ನು ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.
6. ಪ್ರಸ್ತುತ ಜಾರಿಯಲ್ಲಿರುವ ಎನ್.ಇ.ಪಿ. ನಿಯಮಾವಳಿ ಪ್ರಕಾರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸ್ನಾತಕ ಪದವಿ ಪ್ರಥಮ ಸೆಮಿಸ್ಟರ್‌ಗೆ ಆನ್‌ಲೈನ್ ಮೂಲಕ ಪ್ರವೇಶವನ್ನು ಪಡೆದುಕೊಳ್ಳುವುದು ಹೀಗೆ ವಿವಿಧ ಸ್ನಾತಕ ಪದವಿಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಯು ನಿಯಮಾನುಸಾರ 75% ರಷ್ಟು ಹಾಜರಾತಿಯನ್ನು ಹೊಂದಿರತಕ್ಕದ್ದು ಕಡ್ಡಾಯವಾಗಿರುತ್ತದೆ. ಆಯಾ ಕಾಲೇಜುಗಳ ಪ್ರಾಂಶುಪಾಲರು ಈ ಬಗ್ಗೆ ನಿಗಾ ವಹಿಸಲು ಸೂಚಿಸಲಾಗಿದೆ.
7. ಸ್ನಾತಕ ಪದವಿಗಳ ಪ್ರವೇಶ ಪ್ರಕ್ರಿಯೆಯ ದಿನಾಂಕ ಮುಕ್ತಾಯಗೊಂಡ ನಂತರ ಪ್ರಾಂಶುಪಾಲರುಗಳು ವಿದ್ಯಾರ್ಥಿಗಳಿಗೆ ಶಿಫಾರಸ್ಸು ಪತ್ರವನ್ನು ನೀಡಿ ವಿಶ್ವವಿದ್ಯಾಲಯದ ಅನುಮತಿಗಾಗಿ ಕಳುಹಿಸಬಾರದು. ಈ ಹಂತದಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಿದಲ್ಲಿ ಪಠ್ಯಕ್ರಮ ಬೋಧನೆಯಿಂದ ವಂಚಿತರಾಗುವುದಲ್ಲದೆ, ನಿಯಮಾನುಸಾರ ಶೇ.75 ರಷ್ಟು ಹಾಜರಾತಿ ಪಡೆಯಲು ಸಾಧ್ಯವಾಗುವುದಿಲ್ಲ.
8. ವಿಶ್ವವಿದ್ಯಾಲಯದ ಹಾಜರಾತಿ ನಿಯಮಗಳನುಸಾರ ಹಾಜರಾತಿ ನಿರ್ಬಂಧಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತಂದು ಅದನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

9. ಪ್ರವೇಶಾತಿಯ ನಂತರ ಯಾವುದೇ ಕಾರಣಕ್ಕೆ ವಿದ್ಯಾರ್ಥಿಗಳು ಪ್ರವೇಶ ರದ್ದುಪಡಿಸಿಕೊಂಡಲ್ಲಿ ವಿಶ್ವವಿದ್ಯಾಲಯಕ್ಕೆ ಪಾವತಿಸಿರುವ ಯಾವುದೇ ಶುಲ್ಕಗಳನ್ನು ಹಿಂಪಾವತಿಸಲು ಅವಕಾಶವಿರುವುದಿಲ್ಲ.
10. ಪ್ರಾಂಶುಪಾಲರು/ಮುಖ್ಯಸ್ಥರುಗಳು ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಪ್ರವೇಶ ಮಿತಿ ಮತ್ತು ವಿಷಯ ಸಮೂಹಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸಂಯೋಜನೆ ಅಥವಾ ಅನುಮೋದನೆ ಪಡೆಯದ ವಿಷಯ ಸಮೂಹಗಳಿಗೆ ಪ್ರವೇಶ ನೀಡಿದಲ್ಲಿ ವಿಶ್ವವಿದ್ಯಾಲಯವು ಜವಾಬ್ದಾರಿಯಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಪ್ರವೇಶ ಅನುಮೋದನೆಯನ್ನು ತಡೆಹಿಡಿಯಲಾಗುವುದು.
11. ಕರ್ನಾಟಕ ಸರ್ಕಾರದ ಪದವಿ ಪೂರ್ವ ಶಿಕ್ಷಣ ಮಂಡಳಿ ನಡೆಸಿದ 10+02 ಹಂತದ ಪಿ.ಯು.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವವರು ವಿಶ್ವವಿದ್ಯಾಲಯದ ಪದವಿಗಳ ಪ್ರವೇಶಾತಿಗೆ ಅರ್ಹತೆ ಹೊಂದಿರುತ್ತಾರೆ.
12. ಭಾಷೆ /ಐಚ್ಛಿಕ/ಮುಕ್ತ ವಿಷಯಗಳ ಬದಲಾವಣೆಯ ಪ್ರಸ್ತಾವನೆಯನ್ನು ವಿಶ್ವವಿದ್ಯಾಲಯದ ನಿಯಮ ಪ್ರಕಾರ 1ನೇ ಸೆಮಿಸ್ಟರ್ ಪದವಿಯ ವಿದ್ಯಾರ್ಥಿಗಳು ನಿಗದಿತ ವಿಶ್ವವಿದ್ಯಾಲಯದ ಶುಲ್ಕವನ್ನು ತುಂಬಿ ಪ್ರಾಂಶುಪಾಲರ ಶಿಫಾರಸ್ಸಿನೊಂದಿಗೆ ತರಗತಿಗಳು ಪ್ರಾರಂಭವಾದ 30 ದಿನಗಳೊಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ತಡವಾಗಿ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪುರಸ್ಕರಿಸಲಾಗುವುದಿಲ್ಲ.
13. ಪ್ರವೇಶಾನುಮೋದನೆಗಾಗಿ ಸಂಬಂಧಪಟ್ಟ ಮಹಾವಿದ್ಯಾಲಯದವರು ಪ್ರತಿ ವಿದ್ಯಾರ್ಥಿಯ ಹೆಸರು ಮತ್ತು ಐಚ್ಚಿಕ ಮತ್ತು ಭಾಷ ವಿಷಯ, ವಿವಿಧ ಶುಲ್ಕಗಳ ವಿವರಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿಮಾಡಿ, ತ್ರಿಪ್ರತಿಗಳಲ್ಲಿ ಪ್ರವೇಶ ಪ್ರಕ್ರಿಯೆ ಮುಗಿದ ನಂತರ ವಿಶ್ವವಿದ್ಯಾಲಯವು ನೀಡುವ ವೇಳಾಪಟ್ಟಿಯಂತೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ಸದರಿ ವಿವರಗಳನ್ನೊಳಗೊಂಡ ಪಟ್ಟಿಯನ್ನು ಸಿದ್ಧಪಡಿಸಿ ಕಳುಹಿಸುವುದು ಮಹಾವಿದ್ಯಾಲಯದ ಪ್ರಾಂಶುಪಾಲರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ಮೂಲ ಅಂಕಪಟ್ಟಿಗಳು ಇಲ್ಲದೆ ಇದ್ದಲ್ಲಿ ಪ್ರವೇಶಾನುಮೋದನಾ ಪಟ್ಟಿಯನ್ನು ಸ್ವೀಕರಿಸಲಾಗುವುದಿಲ್ಲ. ಪ್ರತಿಯೊಂದು ಐಚ್ಛಿಕ ವಿಷಯ ಗುಂಪಿಗೆ ಕನಿಷ್ಟ 10 ವಿದ್ಯಾರ್ಥಿಗಳಿಗೆ ಕಡಿಮೆ ಇಲ್ಲದಂತೆ ಪವೇಶ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅಂತಹ ಪ್ರವೇಶಗಳನ್ನು ಅನುಮೋದಿಸಲಾಗುವುದಿಲ್ಲ.
14. ಪ್ರವೇಶಾನುಮೋದನಾ ಪಟ್ಟಿ ಹಾಗೂ ಇತರೆ ದಾಖಲಾತಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಾಗ ಕೂಲಂಕುಷವಾಗಿ ಪರಿಶೀಲಿಸಿ, ತಿದ್ದುಪಡಿಗಳು ಇಲ್ಲದಂತೆ ನಿಗಾವಹಿಸುವುದು, ಅಲ್ಲದೆ ತಮ್ಮ ಪತ್ರಗಳಲ್ಲಿ ಕಣ್ತಪ್ಪಿನಿಂದಾಗಿ ಎಂಬ ಪದವನ್ನು ಬಳಸಿ ತಿದ್ದುಪಡಿಗಾಗಿ ಅವಕಾಶವನ್ನು ಕೋರಿದಲ್ಲಿ ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
15. 2023–24ನೇ ಶೈಕ್ಷಣಿಕ ಸಾಲಿಗೆ ಪ್ರವೇಶ ಪಡೆಯುತ್ತಿರುವ ಪದವಿಯು ನಾಲ್ಕು/ಮೂರು ವರ್ಷಗಳ ಪದವಿಯಾಗಿರುತ್ತದೆ. ಈ ಪದವಿಯು ವರ್ಷಕ್ಕೆ ಎರಡರಂತೆ ಒಟ್ಟು ಎಂಟು ಸೆಮಿಸ್ಟರ್‌ಗಳನ್ನು ಒಳಗೊಂಡಿರುತ್ತದೆ. ಈ ಹೊಸ ಪದವಿ ಶಿಕ್ಷಣದಲ್ಲಿ ಮೊದಲಿನಂತೆ HEP, HES, HEK, CBZ, ಹೀಗೆ ಮೂರು ವಿಷಯಗಳನ್ನು ಒಳಗೊಂಡ ಕಾಂಬಿನೇಷನ್‌ಗಳು ಇರುವುದಿಲ್ಲ. ಬದಲಾದ ಎರಡು ವಿಷಯಗಳನ್ನು ಮಾತ್ರ ಒಳಗೊಂಡ ಕಾಂಬಿನೇಷಗಳು ಇರುತ್ತವೆ.
16. ಪ್ರಸ್ತುತ ವರ್ಷ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಬಿ.ಎ.ಅಥವಾ ಬಿ.ಎಸ್‌ಸಿ ಪದವಿ ಅಧ್ಯಯನಕ್ಕೆ ಆಯಾ ಕಾಲೇಜುಗಳಲ್ಲಿ ಲಭ್ಯವಿರುವ ಎರಡು ವಿಷಯಗಳನ್ನು (Discipline Core)ಆಯ್ಕೆ

17. ಮಾಡಿಕೊಳ್ಳಬೇಕು. ನಂತರ ಮೂರನೇ ವರ್ಷದ ಪ್ರಾರಂಭದಲ್ಲಿ ಒಂದು ವಿಷಯವನ್ನು ಮೇಜರ್ ಆಗಿಯೂ, ಇನ್ನೊಂದು ವಿಷಯವನ್ನು ಮೈನರ್ ವಿಷಯವನ್ನಾಗಿಯೂ ಅಥವಾ ಎರಡು ವಿಷಯಗಳನ್ನು ಮೇಜರ್ ಆಗಿ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬಹುದಾಗಿದೆ.

18. ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುವ ಎರಡು ವಿಷಯಗಳ (Discipline Core) ಜೊತೆಗೆ ಎರಡು ಭಾಷಾ ವಿಷಯಗಳನ್ನು ಮತ್ತು ಪ್ರೋಗ್ರಾಮ್ ವಿನ್ಯಾಸಕ್ಕೆ (Curriculum Structure) ಅನುಗುಣವಾಗಿ Open Electives ಮತ್ತು Discipline Electives ಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

19. ವಿಷಯಾಧಾರಿತ ಸ್ನಾತಕ ಪದವಿ ಅಧ್ಯಯನಗಳಿಗೆ (B.com, BCA, BBA, BVA, BPA, etc) ಸಂಬಂಧಪಟ್ಟ ಹಾಗೆ ವಿಷಯಗಳನ್ನು (Discipline Core) ಆಯ್ಕೆ ಮಾಡಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಅವರು ಎರಡು ಭಾಷಾ ಭಾಷೆಗಳು ಮತ್ತು ಪ್ರೋಗ್ರಾಮ್ ವಿನ್ಯಾಸಕ್ಕೆ (Curriculum Structure) ಅನುಗುಣವಾಗಿ Open Electives ಮತ್ತು Discipline Electives ಗಳನ್ನು ಆಯ್ಕೆ ಮಾಡಿಕೊಳ್ಳುವುದು.

20. ವಿದ್ಯಾರ್ಥಿಯು ಪ್ರಥಮ ವರ್ಷದಲ್ಲಿ (National Skills Qualifications Framework Level 5) ನಿಗದಿತ ಪಠ್ಯಕ್ರಮವನ್ನು ಅಧ್ಯಯನ ಮಾಡಿ, ಅವಶ್ಯಕ Credit ಗಳನ್ನು ಗಳಿಸಿ ಕಾರಣಾಂತರಗಳಿಂದ ಅಧ್ಯಯನದಿಂದ ನಿರ್ಗಮಿಸಿದರೆ ಪ್ರಮಾಣ ಪತ್ರವನ್ನು (Certificate) ನೀಡುವುದು.

21. ವಿದ್ಯಾರ್ಥಿಯು ಎರಡನೇ ವರ್ಷದ ಅಧ್ಯಯನವನ್ನು ಮುಂದುವರೆಸಿ (National Skills Qualifications Framework Level 6) ನಿಗದಿತ ಪಠ್ಯಕ್ರಮವನ್ನು ಅಧ್ಯಯನ ಮಾಡಿ, ಅವಶ್ಯಕ Credit ಗಳನ್ನು ಗಳಿಸಿ ಕಾರಣಾಂತರಗಳಿಂದ ಅಧ್ಯಯನದಿಂದ ನಿರ್ಗಮಿಸಿದರೆ ಡಿಪ್ಲೋಮಾ(Diploma) ನೀಡುವುದು.

22. ವಿದ್ಯಾರ್ಥಿಯು ಮೂರನೇ ವರ್ಷದ ಅಧ್ಯಯನವನ್ನು ಮುಂದುವರೆಸಿ (National Skills Qualifications Framework Level 7) ನಿಗದಿತ ಪಠ್ಯಕ್ರಮವನ್ನು ಅಧ್ಯಯನ ಮಾಡಿ, ಅವಶ್ಯಕ Credit ಗಳನ್ನು ಗಳಿಸಿ ಕಾರಣಾಂತರಗಳಿಂದ ಅಧ್ಯಯನದಿಂದ ನಿರ್ಗಮಿಸಿದರೆ ಸ್ನಾತಕ ಪದವಿಯನ್ನು (Bachelor Degree) ನೀಡುವುದು.

23. ವಿದ್ಯಾರ್ಥಿಗಳು ತಾವು ಅಧ್ಯಯನ ಮಾಡುತ್ತಿರುವ ಮಹಾವಿದ್ಯಾಲಯದಲ್ಲಿ ನಾಲ್ಕನೇ ವರ್ಷದ ಅಧ್ಯಯನ ಲಭ್ಯವಿದ್ದಲ್ಲಿ (National Skills Qualifications Framework Level 8) ಅವರು ಆಯ್ಕೆ ಮಾಡಿದ ಐಚ್ಛಿಕ ವಿಷಯಗಳ ಅಧ್ಯಯನವನ್ನು ಮುಂದುವರೆಸಿ ಅವಶ್ಯಕ Credit ಗಳನ್ನು ಗಳಿಸಿ ಅಧ್ಯಯನವನ್ನು ಪೂರ್ಣಗೊಳಿಸಿದರೆ ಸ್ನಾತಕ ಹಾನರ್ಸ್ ಪದವಿ (Honours Degree) ಪಡೆಯಬಹುದು. ನಾಲ್ಕನೇ ವರ್ಷದಲ್ಲಿ ಸಂಶೋಧನೆ ಚಟುವಟಿಕೆಯು (Research Project) ಅಧ್ಯಯನದ ಭಾಗವಾದರೆ ಅಂತಹ ಸ್ನಾತಕ ಹಾನರ್ಸ್ ಪದವೀಧರರು ನೇರವಾಗಿ ಡಾಕ್ಟರೇಟ್ (Ph.D) ಪದವಿ ಅಧ್ಯಯನಕ್ಕೆ ಸೇರಲು ಅರ್ಹರಾಗಿರುತ್ತಾರೆ.

24. ಒಂದು ವೇಳೆ ವಿದ್ಯಾರ್ಥಿಯು ಅಧ್ಯಯನ ಮಾಡುತ್ತಿರುವ ಮಹಾವಿದ್ಯಾಲಯದಲ್ಲಿ ಸ್ನಾತಕ ಹಾನರ್ಸ್ ಪದವಿ ತರಗತಿಗಳು ಲಭ್ಯವಿಲ್ಲದಿದ್ದರೆ ವಿದ್ಯಾರ್ಥಿಯು ನಾಲ್ಕನೇ ವರ್ಷದ ಸ್ನಾತಕ ಹಾನರ್ಸ್ ಪದವಿಗೆ ಬೇರೊಂದು ಮಹಾವಿದ್ಯಾಲಯವನ್ನು ಸೇರಬಹುದು.
25. ಮಹಾವಿದ್ಯಾಲಯಗಳು ನಾಲ್ಕನೇ ವರ್ಷದ ಸ್ನಾತಕ ಹಾನರ್ಸ್ ಪದವಿ ತರಗತಿಗಳನ್ನು ನಡೆಸಲೇಬೇಕೆಂಬ ಕಡ್ಡಾಯವಿಲ್ಲ.
26. ವಿದ್ಯಾರ್ಥಿಯು ಯಾವುದೇ ಹಂತದಲ್ಲಿ ಗಳಿಸಬೇಕಾದ Credit ಗಳ ಗರಿಷ್ಠ ಶೇಕಡಾ 40% ರಷ್ಟು Credit ಗಳನ್ನು ಅಧಿಕೃತ ಆನ್‌ಲೈನ್ ಕೋರ್ಸ್‌ಗಳ ಮುಖಾಂತರ ಗಳಿಸಿ ತನ್ನ ಶೈಕ್ಷಣಿಕ ಖಾತೆಯಲ್ಲಿ ಜಮಾ ಮಾಡಿಕೊಳ್ಳಬಹುದು.
27. ವಿದ್ಯಾರ್ಥಿಯು ಯಾವ ವಿಶ್ವವಿದ್ಯಾಲಯದಿಂದ ಪದವಿಗಳನ್ನು ಪಡೆಯಲು ಬಯಸುತ್ತಾನೆಯೋ, ಆ ವಿಶ್ವವಿದ್ಯಾಲಯದಿಂದ ಕನಿಷ್ಠ ಶೇಕಡ 50% Credit ಗಳನ್ನು ಪಡೆದುಕೊಳ್ಳಬೇಕಾಗಿರುತ್ತದೆ.
28. ವಿದ್ಯಾರ್ಥಿಯು Discipline Core, Open Electives ಮತ್ತು Discipline Electives ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಆ ವಿಷಯದಅಧ್ಯಯನಕ್ಕೆ ನಿಗದಿತ ಪೂರಕ ಅವಶ್ಯಕತೆಗಳನ್ನು (Pre-Requisite) ಪೂರೈಸಬೇಕಾಗುತ್ತದೆ. ಉದಾಹರಣೆಗೆ: Physics ಅಥವಾ Mathematics ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕಾದರೆ ಪಿಯುಸಿ ಅಥವಾ (10+2)ನಲ್ಲಿ ಆ ವಿಷಯಗಳನ್ನು ಅಧ್ಯಯನ ಮಾಡಿರಬೇಕು. ಒಂದು ವೇಳೆ ಪಿಯುಸಿ ಅಥವಾ (10+2)ನಲ್ಲಿ ಆ ವಿಷಯಗಳನ್ನು ಅಧ್ಯಯನ ಮಾಡಿರದಿದ್ದರೆ, ಆ ವಿಷಯದಲ್ಲಿ ಅಧಿಕೃತ Prerequiste Course ಗಳನ್ನು ಅಧ್ಯಯನ ಮಾಡಿರಬೇಕಾಗಿರುತ್ತದೆ.
29. ವಿದ್ಯಾರ್ಥಿಗಳು ಸಮ ಸಂಖ್ಯೆಯ ಸೆಮಿಸ್ಟರ್ ನಂತರ ನಿರ್ಗಮಿಸಬಹುದು, ಆಗ ಮಾತ್ರ ನಿಗದಿತ Certificate, Diploma, Degree ಹಾಗೂ Honors Degree ನೀಡಲು ಸಾಧ್ಯವಾಗುತ್ತದೆ. ಪ್ರತಿಯೊಂದು ಹಂತಕ್ಕೆ ಎರಡು ಸೆಮಿಸ್ಟರ್‌ಗಳಲ್ಲಿ ನಿಗದಿಪಡಿಸಿದ ಅಧ್ಯಯನವನ್ನು ಪೂರ್ಣಗೊಳಿಸಬೇಕಾಗುತ್ತದೆ.
30. ಬೆಸ ಸಂಖ್ಯೆಯ ಸೆಮಿಸ್ಟರ್‌ಗಳಿಗೆ ಮಾತ್ರ ಮರುಪ್ರವೇಶ ಪಡೆಯಬಹುದು. (ಉದಾಹರಣೆಗೆ: 3, 5, 7ನೇಯ ಸೆಮಿಸ್ಟರ್‌ಗಳಲ್ಲಿ)
31. ಮೂರು ವರ್ಷದ ಸ್ನಾತಕ ಪದವಿ ಅಥವಾ ನಾಲ್ಕು ವರ್ಷದ ಸ್ನಾತಕ ಹಾನರ್ಸ್ ಪದವಿ ಜೊತೆಗೆ, ಅರ್ಹ ಮಹಾವಿದ್ಯಾಲಯಗಳಲ್ಲಿ ಐದು ವರ್ಷದ ಏಕೀಕೃತ ಸ್ನಾತಕೋತ್ತರ ಪದವಿಗಳನ್ನು ನಡೆಸಬಹುದು. ಆ ಸಂದರ್ಭಗಳಲ್ಲಿ ಮೂರು ಮತ್ತು ನಾಲ್ಕನೇ ವರ್ಷದ ಅಧ್ಯಯನ ಮುಗಿಸಿ ಕಾರಣಾಂತರಗಳಿಂದ ನಿರ್ಗಮಿಸಿದರೆ ಅನುಕ್ರಮವಾಗಿ ಸ್ನಾತಕ ಮತ್ತು ಸ್ನಾತಕ ಹಾನರ್ಸ್ ಪದವಿಗಳನ್ನು ನೀಡಬಹುದು.
32. ಸ್ನಾತಕೋತ್ತರ ಪದವಿಗಳು ಒಂದು ಅಥವಾ ಎರಡು ವರ್ಷಗಳ ಅವಧಿಯದ್ದಾಗಿರುತ್ತವೆ. ಒಂದು ವರ್ಷದ ಸ್ನಾತಕೋತ್ತರ ಪದವಿಗೆ ಸೇರಲು ನಾಲ್ಕು ವರ್ಷದ ಸ್ನಾತಕ ಹಾನರ್ಸ್ ಪದವಿ ಪಡೆದ ಪದವೀಧರರು ಅರ್ಹರಾಗಿರುತ್ತಾರೆ. ಹಾಗೆಯೇ ಎರಡು ವರ್ಷದ ಸ್ನಾತಕೋತ್ತರ ಪದವಿಗೆ ಸೇರಲು ಮೂರು ವರ್ಷದ ಸ್ನಾತಕ ಪದವಿ ಪಡೆದವರು ಅರ್ಹರಾಗುತ್ತಾರೆ.

# ಬಾಗಲಕೋಟ ವಿಶ್ವವಿದ್ಯಾಲಯ

(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
**ಮುಧೋಳ ರಸ್ತೆ, ಜಮಖಂಡಿ–587301 ಬಾಗಲಕೋಟೆ ಜಿಲ್ಲೆ**

## Bagalkot University

(State Public University of Govt. of Katakana)
Mudhol Road, Jamkhandi-587301 Dist: Bagalkote

**Mail ID** : **bgkujkd@gmail.com**
**Website: https:// bgku.ac.in**

## ಕುಲಸಚಿವರ ಕಾರ್ಯಾಲಯ

**Tel No:** (08353)295123, 295124

BGKUJ/RO/2023-24/75 Date:01/06/2023

## ಸುತ್ತೋಲೆ

**ವಿಷಯ:** 2023–24ನೇ ಸಾಲಿನ ಸ್ನಾತಕ ಕೋರ್ಸುಗಳ ಪ್ರವೇಶಾತಿ ಶುಲ್ಕದ ಕುರಿತು.
**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:30/05/2023

**ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬಾಗಲಕೋಟ ವಿಶ್ವವಿದ್ಯಾಲಯದ ಅಧೀನ ಹಾಗೂ ಸಂಯೋಜಿತ ಪದವಿ ಮಹಾವಿದ್ಯಾಲಯಗಳ (ಘಟಕ ಮಹಾವಿದ್ಯಾಲಯ, ಸರ್ಕಾರಿ, ಅನುದಾನಿತ, ಅನುದಾನರಹಿತ, ಸ್ವಾಯತ್ತ) ಪ್ರಾರ್ಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, 2023–24ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಕೋರ್ಸಗಳಿಗೆ ಪ್ರವೇಶಾತಿ ಬಯಸಿ ಬರುವ ವಿದ್ಯಾರ್ಥಿಗಳಿಂದ ಈ ಕೆಳಕಾಣಿಸಿದಂತೆ ಪ್ರವೇಶಾತಿ ಶುಲ್ಕ ಪಡೆದುಕೊಂಡು ಪ್ರವೇಶಾತಿಯನ್ನು ನೀಡಬೇಕೆಂದು ತಿಳಿಸಲಾಗಿದೆ. (ನೋಂದಣಿ ಶುಲ್ಕ ಪ್ರಥಮ ವರ್ಷದ ವಿದ್ಯಾರ್ಥಿಗಳಿಂದ ಮಾತ್ರ ಆಕರಿಸುವುದು)**

**REGISTRATION & OTHER FEES FOR UG COURSES FOR THE ACADEMIC YEAR 2023-24**

| UG COURSES | GM/OBC | | | SC/ST (ELIGIBLE FOR SCHOLARSHIP STUDENTS) IF INCOME BELOW Rs. 2,00,000/- | | | CAT -I | | |
|---|---|---|---|---|---|---|---|---|---|
| | REG FEES | OTHER FEES | TOTAL | REG FEES | OTHE R FEES | TOTAL | REG FEES | OTHER FEES | TOTAL |
| A) Under Graduate Professional Courses: BBA/BCA/B.Com(CS), B.Sc.(CS)/ BSW/ Other Professional Courses) | 2400 | 650 | 3050 | 1200 | 570 | 1770 | 1200 | 650 | 1850 |
| B)Under Graduate Non-Professional Courses: BA/B.Sc/ B.Sc (Sugar Techonology)/ B.Com/other Non-Professional Courses | 600 | 650 | 1250 | 300 | 570 | 870 | 300 | 650 | 950 |

ಸೂಚನೆ: ಎಸ್ಸಿ, ಎಸ್.ಟಿ, ಪ್ರವರ್ಗ–I ವಿದ್ಯಾರ್ಥಿಗಳಿಗೆ ನೊಂದಣಿ ಶುಲ್ಕದಲ್ಲಿ ನೀಡಿದ ವಿನಾಯತಿಯ ಮೊತ್ತವನ್ನು ಶಿಷ್ಯವೇತನ ಮಂಜೂರಾದ ನಂತರ ಕಡ್ಡಾಯವಾಗಿ ವಿಶ್ವವಿದ್ಯಾಲಯಕ್ಕೆ ಭರಿಸತಕ್ಕದ್ದು. ಒಂದು ವೇಳೆ ಶಿಷ್ಯವೇತನ ಕಡಿಮೆ ಮಂಜೂರಾದಲ್ಲಿ, ಶಿಷ್ಯವೇತನ ಮಂಜೂರಾಗದೇ ಇದ್ದಲ್ಲಿ ಹಾಗೂ ಶೀಷ್ಯವೇತನಕ್ಕೆ ಅರ್ಜಿಸಲ್ಲಿಸದೇ ಇದ್ದಲ್ಲಿ ವಿದ್ಯಾರ್ಥಿಗಳಿಂದ ಬಾಕಿ ಶುಲ್ಕವನ್ನು ಆಕರಿಸಿ ವಿಶ್ವವಿದ್ಯಾಲಯಕ್ಕೆ ಭರಿಸತಕ್ಕದ್ದು.

ಕುಲಸಚಿವರು

ಇವರಿಗೆ,
1. ಪ್ರಾಚಾರ್ಯರು, ಬಾಗಲಕೋಟ ವಿಶ್ವವಿದ್ಯಾಲಯದ ಅಧೀನ ಹಾಗೂ ಸಂಯೋಜಿತ ಪದವಿ ಮಹಾವಿದ್ಯಾಲಯಗಳು.

ಬಾಗಲಕೋಟ ವಿಶ್ವವಿದ್ಯಾಲಯ
(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
ಮುಧೋಳ ರಸ್ತೆ, ಜಮಖಂಡಿ–587301 ಬಾಗಲಕೋಟೆ ಜಿಲ್ಲೆ
Bagalkot University
(A State Public University of Govt. of Katakana)
Mudhol Road, Jamkhandi-587301 Dist: Bagalkote
Mail ID : bgkujkd@gmail.com
Website: https:// bgku.ac.in
ಕುಲಸಚಿವರ ಕಾರ್ಯಾಲಯ Tel No: (08353)295123, 295124

BGKUJ/RO/2023-24/76 Date:01/06/2023

# ಸುತ್ತೋಲೆ

**ವಿಷಯ:**2023–24ನೇ ಸಾಲಿಗಾಗಿ ವಿವಿಧ ಸ್ನಾತಕ ಕೋರ್ಸುಗಳಿಗೆ ಪ್ರವೇಶ ನೀಡುವಾಗ ಆಯಾ ಕೋರ್ಸುಗಳಿಗೆ ಸಂಬಂಧಿಸಿದ ಶುಲ್ಕ ಆಕರಿಸಿ ವಿಶ್ವವಿದ್ಯಾಲಯಕ್ಕೆ ಕೋರ್ಸುವಾರು ಸಂದಾಯ ಮಾಡಬೇಕಾದ ಇತರೆ ಶುಲ್ಕದ ವಿವರ ಕುರಿತು(ಪ್ರಥಮ ವರ್ಷದ ನೊಂದಣಿ ಶುಲ್ಕ ಹೊರತುಪಡಿಸಿ)
**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:30/05/2023

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, ಬಾಗಲಕೋಟ ವಿಶ್ವವಿದ್ಯಾಲಯ ವ್ಯಾಪ್ತಿಯ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ತಿಳಿಸುವದೇನೆಂದರೆ, ವಿಶ್ವವಿದ್ಯಾಲಯವು 2023–24 ನೇ ಸಾಲಿನಿಂದ ಅನ್ವಯವಾಗುವಂತೆ, ವಿವಿಧ ಸ್ನಾತಕ ಕೋರ್ಸಗಳಿಗೆ ಪ್ರವೇಶ ನೀಡುವಾಗ ಆಯಾ ಕೋರ್ಸುಗಳಿಗೆ ಗೊತ್ತುಪಡಿಸಿದ ಇತರೇ ಶುಲ್ಕಗಳನ್ನು (ಪ್ರಥಮ ವರ್ಷದ ನೊಂದಣಿ ಶುಲ್ಕ ಹೊರತುಪಡಿಸಿ) ಅವಲೋಕಿಸಿ ಕಾರ್ಯಗತಗೊಳಿಸುವುದು.

| ಅ. ಸಂ | Other Fees /ಇತರೆ ಶುಲ್ಕ | ಲೆಕ್ಕ ಶೀರ್ಷಿಕೆ ಸಂಖ್ಯೆ/ Budget Head No. | ಶುಲ್ಕ ಮೊತ್ತ ರೂ. | |
|---|---|---|---|---|
| | | | (GM/OBC/CAT-1) | (SC/ST) |
| 1 | College Development Council Fees<br>ಕಾಲೇಜು ಅಭಿವೃದ್ಧಿ ಸಮಿತಿ ಶುಲ್ಕ | 406 | 36 | 36 |
| 2 | Career Guidance Service Fees<br>ಉದ್ಯೋಗ ಮಾರ್ಗದರ್ಶಿ ಸೇವಾ ಶುಲ್ಕ | 218 | 29 | 29 |
| 3 | Sports Fees<br>ಕ್ರೀಡಾ ಶುಲ್ಕ | 205 | 57 | 57 |
| 4 | Sports Development Fees<br>ಕ್ರೀಡಾ ಅಭಿವೃದ್ಧಿಶುಲ್ಕ | 811 | 57 | 57 |
| 5 | Bagalkot University, Development Fees<br>ಬಾಗಲಕೋಟ ವಿಶ್ವವಿದ್ಯಾಲಯದ ಅಭಿವೃದ್ಧಿ ಶುಲ್ಕ | 216 | 87 | 87 |
| 6 | Poor students aid Fees<br>ಬಡ ವಿದ್ಯಾರ್ಥಿಗಳ ನೆರವು ಶುಲ್ಕ | 206 | 30 | 30 |
| 7 | Youth Festival Fees<br>ಯುವಜನೋತ್ಸವ ಶುಲ್ಕ | 813 | 57 | 57 |
| 8 | BUJ Students's Benefit Scheme (BUJSBS)<br>ಬಾಗಲಕೋಟ ವಿಶ್ವವಿದ್ಯಾಲಯ ವಿದ್ಯಾರ್ಥಿ ಕಲ್ಯಾಣ ಯೋಜನೆ | 311 | 22 | 22 |
| 9 | BUJ Students Welfare Fees<br>ವಿದ್ಯಾರ್ಥಿ ಕಲ್ಯಾಣ ಶುಲ್ಕ | 217 | 80 | 00 |
| 10 | Scouts and Guides<br>ಸ್ಕೌಟ್ಸ್ ಮತ್ತು ಗೈಡ್ಸ್ | 310 | 57 | 57 |
| 11 | Other Fees<br>ಇತರೆ | 409 | 138 | 138 |
| **Total Rs.** | | | **650** | **570** |

- *ಪ್ರತಿ ಕಾಲೇಜು ತಾನು ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಹಣದಲ್ಲಿ ರೂ. 5/–ನ್ನು ವಿದ್ಯಾರ್ಥಿ ಕಲ್ಯಾಣ ಕಾರ್ಯಕ್ರಮಕ್ಕಾಗಿ ಮುರುಗಡೆ ಮಾಡಿ ಉಪಯೋಗಿಸುವುದು. (ಎಸ್.ಸಿ/ ಎಸ್.ಟಿ. ವಿದ್ಯಾರ್ಥಿಗಳಿಗೆ ರಿಯಾಯಿತಿ ಇರುತ್ತದೆ)*
- *ವಿಶೇಷ ಸೂಚನೆ: ಹೆಚ್ಚಿನ ಮಾಹಿತಿಗಾಗಿ ಬಾಗಲಕೋಟ ವಿಶ್ವವಿದ್ಯಾಲಯದ ವೆಬ್‌ಸೈಟ್ https://bgku.ac.in ನ್ನು ಗಮನಿಸುವುದು.*

# ಬಾಗಲಕೋಟ ವಿಶ್ವವಿದ್ಯಾಲಯ

(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
**ಮುಧೋಳ ರಸ್ತೆ, ಜಮಖಂಡಿ–587301 ಬಾಗಲಕೋಟೆ ಜಿಲ್ಲೆ**

## Bagalkot University

(A State Public University of Govt. of Katakana)
Mudhol Road, Jamkhandi-587301 Dist: Bagalkote

**Mail ID** : **bgkujkd@gmail.com**
**Website: https:// bgku.ac.in**

**ಕುಲಸಚಿವರ ಕಾರ್ಯಾಲಯ** **Tel No:** (08353)295123, 295124


BGKUJ/RO/2023-24/77 Date:01/06/2023

# ಸುತ್ತೋಲೆ

**ವಿಷಯ:** 2023–24ನೇ ಸಾಲಿಗಾಗಿ ವಿವಿಧ ಸ್ನಾತಕ ಕೋರ್ಸುಗಳಿಗೆ ಪ್ರವೇಶಾತಿಗೆ ಸಂಬಂಧಿಸಿದ ಶುಲ್ಕದ ವಿವರಣೆಯ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:30/05/2023

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, ಬಾಗಲಕೋಟ ವಿಶ್ವವಿದ್ಯಾಲಯದ ಅಧೀನ ಹಾಗೂ ಸಂಯೋಜಿತ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯರುಗಳಿಗೆ ತಿಳಿಸುವದೇನೆಂದರೆ, ವಿಶ್ವವಿದ್ಯಾಲಯವು 2023–24ನೇ ಸಾಲಿನಿಂದ ಅನ್ವಯವಾಗುವಂತೆ, ವಿವಿಧ ಸ್ನಾತಕ ಕೋರ್ಸುಗಳಿಗೆ ಪ್ರವೇಶ ನೀಡುವಾಗ ಪ್ರವೇಶಾತಿಗೆ ಸಂಬಂಧಿಸಿದ ವಿವಿಧ ಶುಲ್ಕಗಳನ್ನು ಆಕರಿಸುವ ಅವಲೋಕಿಸಿ ಕಾರ್ಯಗತಗೊಳಿಸುವುದು.

| ಅ. ಸಂ | ವಿವಿಧ ಶುಲ್ಕ | ಬಿ.ಎ/ ಬಿ.ಕಾಂ/ ಬಿ.ಎಸ್ಸಿ./ ಬಿ.ಎಸ್ಸಿ(ಶುಗರ್ಸ್) | ಬಿ.ಬಿ.ಎ/ ಬಿಸಿಎ/ ಬಿ.ಎಸ್.ಡಬ್ಲ್ಯೂ/ ಬಿ.ಕಾಂ(ಸಿ.ಎಸ್) |
|---|---|---|---|
| 1 | Eligibility Certificate (Indian Students)<br>ಅರ್ಹತಾ ಪ್ರಮಾಣ ಪತ್ರ (ಭಾರತೀಯ ವಿದ್ಯಾರ್ಥಿಗಳಿಗೆ) | 1,200 | 1,800 |
| 2 | Eligibility Certificate (Indian Students with foreign Board/ Foreign Students)<br>ಅರ್ಹತಾ ಪ್ರಮಾಣ ಪತ್ರ (ವಿದೇಶಿ ಬೋರ್ಡ್‌ನಲ್ಲಿ ಅಧ್ಯಯನಿಸಿದ ಭಾರತೀಯ ವಿದ್ಯಾರ್ಥಿ/ ವಿದೇಶಿ ವಿದ್ಯಾರ್ಥಿಗಳಿಗೆ) | 10,000 | 10000 |
| 3 | Change of College (Only in Special Case-refer University circular)<br>ಮಹಾವಿದ್ಯಾಲಯ ವರ್ಗಾವಣೆ (ಕೇವಲ ವಿಶೇಷ ಸಂದರ್ಭದಲ್ಲಿ ಮಾತ್ರ) | 5,000 | 5,000 |
| 4 | Readmission with Change of College (Only in Special Case-refer University circular)<br>ಮರುಪ್ರವೇಶಾತಿಯೊಂದಿಗೆ ಮಹಾವಿದ್ಯಾಲಯ ವರ್ಗಾವಣೆ (ಕೇವಲ ವಿಶೇಷ ಸಂದರ್ಭದಲ್ಲಿ ಮಾತ್ರ) | 5,600 | 5,600 |
| 5 | Readmission Fees<br>ಮರುಪ್ರವೇಶಾತಿ ಶುಲ್ಕ | 600 | 600 |
| 6 | Change of Subject Fees<br>ವಿಷಯ ಬದಲಾವಣೆ | 1,500 | 1,500 |
| 7 | Change of University Fees<br>ವಿಶ್ವವಿದ್ಯಾಲಯದಿಂದ ವಿಶ್ವವಿದ್ಯಾಲಯದ ಬದಲಾವಣೆ | 6,000 | 6,000 |
| 8 | Admission Cancel Fees<br>ಪ್ರವೇಶ ರದ್ಧತಿ | 2,000 | 2,000 |
| 9 | Admission made by Student Without Eligibility – penal Fees<br>ಅರ್ಹತಾ ಪ್ರಮಾಣ ಪತ್ರ ಪಡೆಯದೇ ಪ್ರವೇಶ ಪಡೆದ ವಿದ್ಯಾರ್ಥಿಗಳಿಂದ ಆಕರಿಸುವ ದಂಡಶುಲ್ಕ | 1,000 | 1,000 |
| 10 | Admission taken by College Principal without Eligibility-Penal Fees<br>ಅರ್ಹತಾ ಪ್ರಮಾಣ ಪತ್ರ ಪಡೆಯದೇ ಪ್ರವೇಶ ನೀಡಿದ ಪ್ರಾಚಾರ್ಯರುಗಳಿಂದ ಆಕರಿಸುವ ದಂಡಶುಲ್ಕ | 12,000 | 12,000 |
| 11 | Admission cancel processing fees– Before starting Regular Classes<br>ತರಗತಿಗಳು ಪ್ರಾರಂಭಕ್ಕಿಂತ ಮುಂಚೆ ಬಿಟ್ಟು ಹೋಗುವ ವಿದ್ಯಾರ್ಥಿಗಳಿಂದ ಮುರಿದುಕೊಳ್ಳುವ ಪ್ರೊಸೆಸಿಂಗ್ ಶುಲ್ಕ | 1,500 | 1,500 |

**ಕುಲಸಚಿವರು**

**ಪ್ರವೇಶ ಅವಧಿ:**

ಬಾಗಲಕೋಟ ವಿಶ್ವವಿದ್ಯಾಲಯದ ಸಂಯೋಜಿತ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯರು ಶೈಕ್ಷಣಿಕ ವೇಳಾಪಟ್ಟಿಯಲ್ಲಿ ನಿಗದಿಪಡಿಸಿರುವಂತೆ ವಿವಿಧ ಪದವಿ ಕೋರ್ಸುಗಳಿಗೆ ವಿಶ್ವವಿದ್ಯಾಲಯದ ನಿಯಮಾವಳಿಗಳ ಅನುಗುಣವಾಗಿ ಮೊದಲು ಬಂದವರಿಗೆ ಮೊದಲ ಆದ್ಯತೆ ಮತ್ತು ಮೀಸಲಾತಿ ವರ್ಗೀಕರಣ (ರೋಸ್ಟರ) ಪ್ರಕಾರ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು.

1) **ದಂಡರಹಿತ ಪ್ರವೇಶ:** ಪ್ರವೇಶವು ಆಯಾ ಪದವಿಗೆ ಸಂಬಂಧಿಸಿ ಗೊತ್ತುಪಡಿಸಿದ ಕೊನೆಯ ದಿನಾಂಕದವರೆಗೆ ಮಾತ್ರ ಸೀಮಿತವಾಗಿರುತ್ತದೆ.

2) **ದಂಡ ಸಹಿತ ಪ್ರವೇಶ:** ದಂಡರಹಿತ ಪ್ರವೇಶದ ಕೊನೆಯ ದಿನಾಂಕದ ನಂತರದ ದಿನದಿಂದ ವಿಶ್ವವಿದ್ಯಾಲಯ ನಿಗದಿಪಡಿಸಿದ ದಂಡದ ಹಣದೊಂದಿಗೆ **UUCMS**ನಲ್ಲಿ (ಶೈಕ್ಷಣಿಕ ವೇಳಾಪಟ್ಟಿಯಲ್ಲಿ ನಮೂದಿಸಿದಂತೆ) ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು.

ದಂಡದೊಂದಿಗೆ ಕೊನೆಯ ಅವಧಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ರಜಾ ದಿನಗಳಲ್ಲಿ ಅಲ್ಲದೇ ನಿಯಮಿತ ತರಗತಿಗಳನ್ನು ಹೊರತುಪಡಿಸಿ, ಉಳಿದ ಅವಧಿಯಲ್ಲಿ ವಿಶೇಷ ತರಗತಿಗಳನ್ನು ನಡೆಸಿ ವಿದ್ಯಾರ್ಥಿಯ ಕನಿಷ್ಠ ಹಾಜರಾತಿಯನ್ನು ತುಂಬಿಕೊಡುವಲ್ಲಿ ಪ್ರಾಂಶುಪಾಲರು **"ಮುಚ್ಚಳಿಕೆಪತ್ರ"** (Undertaking letter) ನೀಡಿ ವೈಯಕ್ತಿಕ ಜವಾಬ್ದಾರಿಯನ್ನು ಪ್ರಾಚಾರ್ಯರು ತೆಗೆದುಕೊಂಡು ಅಂತಹ ವರ್ಗಗಳನ್ನು ನಡೆಸುವಲ್ಲಿ ಅಂಕಿಅಂಶಗಳೊಂದಿಗೆ ಸಮರ್ಥನೆ ನೀಡಿದರೆ ಮಾತ್ರ ವಿಶ್ವವಿದ್ಯಾಲಯವು ಇಂತಹ ಪ್ರವೇಶಗಳನ್ನು ಪರಿಗಣಿಸಿ, ಅನುಮೋದಿಸುವಲ್ಲಿ ಪರಿಶೀಲಿಸಲಾಗುವುದು.

(1) UGC/IUB/A.C ನಿರ್ದೇಶನದ ಮೇರೆಗೆ ಆಯಾ ಕೋರ್ಸುಗಳಿಗೆ ಪರಿಷ್ಕೃತ ವಿನಿಯಮಗಳ ಅಡಿಯಲ್ಲಿ **ಕನಿಷ್ಠ ಹಾಜರಾತಿ 75%** ಇರುವುದು ಅವಶ್ಯಕ. ಯಾವುದೇ ಹಂತದಲ್ಲಿ ಈ ಕನಿಷ್ಠ ಹಾಜರಾತಿಗೆ ಸನ್ **2012–13**ನೇ ಸಾಲಿನಿಂದ ವಿನಾಯಿತಿ ಇರುವುದಿಲ್ಲ ಎಂಬುದನ್ನು ಪ್ರಾಚಾರ್ಯರು ಗಮನಿಸುವುದು ಹಾಗೂ ಪದವಿ ಮಹಾವಿದ್ಯಾಲಯದ ಪರಿಚಯದ ಪುಸ್ತಕದಲ್ಲಿ ಕಡ್ಡಾಯವಾಗಿ ನಮೂದಿಸುವುದು, ಅದರಂತೆ ವಿದ್ಯಾರ್ಥಿಗಳಿಗೆ ತಿಳಿಸುವುದು.

(2) **ಪ್ರವೇಶ ಮಿತಿ:**
ಪ್ರತಿ ಪದವಿ ವರ್ಗಕ್ಕೆ ವಿಶ್ವವಿದ್ಯಾಲಯವು ನಿಗದಿಪಡಿಸಿದ ಪ್ರವೇಶಾವಕಾಶದ ಸಂಖ್ಯೆಯ ಮಿತಿಯೊಳಗೆ (Intake) ಮಾತ್ರ ಪ್ರವೇಶ ನೀಡುವುದು ಕಡ್ಡಾಯವಾಗಿರುತ್ತದೆ.

**I)** **ಪ್ರವೇಶ ಪಡೆದ ವಿದ್ಯಾರ್ಥಿಗಳ ಯಾದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.**
ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಗೊತ್ತುಪಡಿಸಿದ ವಿವಿಧ ಹಂತಗಳಲ್ಲಿನ ಪ್ರವೇಶ ಮುಗಿದ ನಂತರ ವಿಶ್ವವಿದ್ಯಾಲಯ ಗೊತ್ತುಪಡಿಸಿದ ನಮೂನೆಗಳಲ್ಲಿ ವಿದ್ಯಾರ್ಥಿಗಳ ಯಾದಿಗಳನ್ನು ತಯಾರಿಸಿ 2023–24ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ನಿಗದಿಪಡಿಸಿದ ದಿನಾಂಕದಂದು ವಿದ್ಯಾಮಂಡಳ ವಿಭಾಗಕ್ಕೆ ಗುಣಾತ್ಮಕವಾಗಿ ಪ್ರತ್ಯೇಕ ಕೋರ್ಸವಾರು ಯಾದಿಗಳನ್ನು ಸಲ್ಲಿಸಬೇಕು.

**II)** ಕಿವುಡು ವಿದ್ಯಾರ್ಥಿಗಳು ಸ್ನಾತಕ ಕೋರ್ಸುಗಳಲ್ಲಿ ಇಂಗ್ಲೀಷ ಭಾಷಾ ವಿಷಯಕ್ಕೆ ಅಥವಾ ಯಾವುದೇ ಭಾಷಾ ವಿಷಯಕ್ಕೆ ವಿನಾಯಿತಿ ನೀಡಲು ಕೋರಿದರೆ (ಈ ವಿಷಯ ಕಡ್ಡಾಯವಿದ್ದರೂ ಸಹಿತ) ಅಂತಹ ಭಾಷಾ ವಿಷಯಕ್ಕೆ ವಿನಾಯಿತಿ ನೀಡಬಹುದಾಗಿದೆ. ಇಂತಹ ಕಿವುಡ ವಿದ್ಯಾರ್ಥಿಗಳ ಭಾಷಾ ವಿಷಯಕ್ಕೆ ವಿನಾಯಿತಿ ಕೋರಿ ಅರ್ಜಿಗಳು ಬಂದಲ್ಲಿ, ಅಂತಹ ಅರ್ಜಿಗಳನ್ನು ಹಾಗೂ ಇದಕ್ಕೆ ಸಂಬಂಧಿಸಿದ ಪೂರಕ ಅವಶ್ಯಕ ದಾಖಲಾತಿಗಳನ್ನು **ಪ್ರಾಚಾರ್ಯರು ಕೂಲಂಕೂಷವಾಗಿ ಪರಿಶೀಲಿಸಿ, ಅನುಮೋದನೆಗಾಗಿ ಮುಂದಿನ ಕ್ರಮಕ್ಕಾಗಿ ನೇರವಾಗಿ ಕುಲಸಚಿವರು (ಮೌಲ್ಯಮಾಪನ) ಪರೀಕ್ಷಾ ವಿಭಾಗ, ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ. ಇವರಿಗೆ ಕಳುಹಿಸುವುದು.**

**III)** **ಸೀಟು ಹಂಚಿಕೆ ಮತ್ತು ಮೀಸಲಾತಿ ಸೌಲಭ್ಯಗಳು:**
ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆ ಮಾಡುವಾಗ ಸರಕಾರದ ನಿಯಾಮಾವಳಿ ಪ್ರಕಾರ ಮೊದಲು ಬಂದವರಿಗೆ ಮೊದಲ ಆದ್ಯತೆ ಹಾಗೂ ಮೇರಿಟ್ ಕಮ್ ರೋಸ್ಟರ್ ಅನುಗುಣವಾಗಿ ಮತ್ತು ಸರಕಾರ ಕಾಲಕಾಲಕ್ಕೆ ಹೊರಡಿಸಿರುವ ವಿವಿಧ ಮೀಸಲಾತಿ ಅಧಿಸೂಚನೆಗಳನ್ವಯ ಸೀಟು ಹಂಚಿಕೆ ಮಾಡುವುದು.

a. ಸರಕಾರದ ಅಧಿಸೂಚನೆ ಸಂ: DPAR 06 PLX 2012 ದಿನಾಂಕ: 06–11–2013 ರನ್ವಯ ಹೈದ್ರಾಬಾದ–ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ ಬಾಗಲಕೋಟ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಸ್ನಾತಕ ಕೋರ್ಸುಗಳಿಗೆ ಶೇಕಡಾ 8% ರಷ್ಟು ಮೀಸಲಾತಿ ಸೌಲಭ್ಯ ಒದಗಿಸುವುದು.

b. ಸ್ನಾತಕ ಪದವಿ ಕೋರ್ಸುಗಳಲ್ಲಿ ಪ್ರವೇಶ ಪಡೆಯಲು ಇಚ್ಛಿಸುವ ಕಾಶ್ಮೀರದಿಂದ ವಲಸೆ ಬರಲಿರುವ ವಿದ್ಯಾರ್ಥಿಗಳಿಗೆ (Kashmiri Migrants) ಪ್ರವೇಶ ಮಿತಿಯಲ್ಲಿ ಶೇಕಡಾ 5% ರಷ್ಟು ಸೀಟುಗಳನ್ನು ಕಾಯ್ದಿರಿಸುವುದು.

**IV)** ಯಾವುದೇ ವಿದ್ಯಾರ್ಥಿಯು ವಿವಿಧ ಸ್ನಾತಕ ಕೋರ್ಸುಗಳಿಗೆ ಪ್ರವೇಶ ಪಡೆದು ತರಗತಿಗಳು ಪ್ರಾರಂಭವಾಗುವದಕ್ಕಿಂತ ಮುಂಚೆಯೇ ಬಿಟ್ಟು ಹೋದರೆ ಅಂತಹ ವಿದ್ಯಾರ್ಥಿಯಿಂದ ಆಕರಿಸಲ್ಪಟ್ಟ ಒಟ್ಟು ಶುಲ್ಕದ ಹಣದಲ್ಲಿ ಪ್ರೊಸೆಸಿಂಗ್ ಶುಲ್ಕ **ರೂ. 1,200/–** (ಹನ್ನೇರಡು ನೂರು ಮಾತ್ರ) ಕಡಿತಗೊಳಿಸಿ ಅಂಥಹ ವಿದ್ಯಾರ್ಥಿಗೆ ಉಳಿದ ಶುಲ್ಕದ ಹಣವನ್ನು ಹಿಂತಿರುಗಿಸುವುದು ಹಾಗೂ ಒಂದು ವೇಳೆ ತರಗತಿಗಳು ಪ್ರಾರಂಭವಾದ ನಂತರ ವಿದ್ಯಾರ್ಥಿಯು ಬಿಟ್ಟು ಹೋದರೆ ಪ್ರತಿ ತಿಂಗಳಿನ ಶುಲ್ಕ ಮತ್ತು ವಸತಿ ಬಾಡಿಗೆ (ಅನ್ವಯವಾದಲ್ಲಿ) ಕಡಿತಗೊಳಿಸಿ ಅಂತಹ ವಿದ್ಯಾರ್ಥಿಯ ಮೂಲ ಪ್ರಮಾಣ ಪತ್ರಗಳನ್ನು ಹಿಂತಿರುಗಿಸುವುದು. ಇಂತಹ ವಿದ್ಯಾರ್ಥಿಗಳು ಬಿಟ್ಟು ಹೋದ ಸೀಟ್‌ನಲ್ಲಿ ಬೇರೆ ವಿದ್ಯಾರ್ಥಿಯ ಪ್ರವೇಶವನ್ನು ನಿಯಮಾನುಸಾರ ಪರಿಶೀಲಿಸಿ ನೀಡಬಹುದು. ಈ ವಿಷಯವಾಗಿ ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಧನ ಸಹಾಯ ಆಯೋಗ, ನವದೆಹಲಿ ಇವರ ಪತ್ರ ಸಂಖ್ಯೆ:F.1-3/2007(CPP-II),Dtd: 30-04-2007ನ್ನು ಗಮನಿಸುವುದು.

**V)** **<u>ಪರೀಕ್ಷಾ ಅರ್ಜಿ ಸಲ್ಲಿಸುವ ಕುರಿತು:</u>**

ವಿದ್ಯಾರ್ಥಿಯು ಒಂದು ವರ್ಗಕ್ಕೆ ಪ್ರವೇಶ ಪಡೆದು ಓದಿದ ವಿಷಯಗಳಿಗೂ ಹಾಗೂ ಆ ವಿದ್ಯಾರ್ಥಿಯು ತುಂಬಬೇಕಾದ ಪರೀಕ್ಷಾ ಅರ್ಜಿಗೂ (ಒಂದಕ್ಕೊಂದು) ಸಂಬಂಧವಿರುವುದರಿಂದ ಪರೀಕ್ಷಾ ಅರ್ಜಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಾಗ ಈ ಕೆಳಗಿನ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲಿಸುವುದು.

1. ಪರೀಕ್ಷಾ ಅರ್ಜಿ ತುಂಬುವ ಮುನ್ನ ವಿದ್ಯಾರ್ಥಿಯ ಹಾಜರಾತಿ ಗಮನಿಸುವುದು.
2. ವಿದ್ಯಾರ್ಥಿ ಹೆಸರು–ವಿಳಾಸ (Spelling Mistake Etc.)
3. ವಿದ್ಯಾರ್ಥಿ ಓದುವ ವಿಷಯಗಳು ಮತ್ತು ಪರೀಕ್ಷೆಗೆ ಹಾಜರಾಗಬೇಕಾಗಿರುವ ವಿಷಯಗಳು ಒಂದೇ ಇವೆಯೋ ಇಲ್ಲವೋ ಎಂಬುದರ ಬಗ್ಗೆ ಹಾಗೂ ವಿಷಯಗಳ ಕೋಡ್ ನಂಬರಗಳು ಸರಿಇರುವಿಕೆ ಬಗ್ಗೆ ಪರಿಶೀಲಿಸುವುದು.
4. ವರ್ಗಾವಣೆ ಆಧಾರದ ಮೇಲೆ ಪ್ರವೇಶ ಪಡೆದ ವಿದ್ಯಾರ್ಥಿಗಳ, "ವರ್ಗಾವಣೆ ಪ್ರಮಾಣ ಪತ್ರ" (T.C)ಯ ಒಂದು ಝುರಾಕ್ಸ ಪ್ರತಿಯನ್ನು ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯೊಂದಿಗೆ ಲಗತ್ತಿಸುವುದು ಕಡ್ಡಾಯ.
5. ಕುಲಸಚಿವರು (ಮೌಲ್ಯಮಾಪನ) ಇವರು ನೀಡುವ ನಿರ್ದೇಶನಗಳನ್ನು ಪಾಲಿಸುವುದು.
6. ಪರೀಕ್ಷಾ ಅರ್ಜಿಗಳನ್ನು ಆಯಾ ಪದವಿ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯರು/ ಅಧೀಕ್ಷಕರು ಪರಿಶೀಲಿಸುವ ಜವಾಬ್ದಾರಿ ಹೊಂದಿರುವ ಪ್ರಯುಕ್ತ; ಆನಂತರ ಬರುವ ಯಾವುದೇ ತಪ್ಪುತಡೆಗೆ ಆಯಾ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯರು ಹೊಣೆಗಾರರು.

**VI)** **<u>ಇತರೆ ನಿಯಮಗಳು:</u>**

1) ಪ್ರಥಮ ವರ್ಷದ ಪ್ರವೇಶ ಪ್ರಕ್ರಿಯೆಯನ್ನು UUCMS ಮೂಲಕ ವಿದ್ಯಾರ್ಥಿಗಳು ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ನಂತರ ಮಹಾವಿದ್ಯಾಲಯದವರು Doccuments Verification ಮಾಡಲು ದಿನಾಂಕವನ್ನು ನೀಡುವುದು. Doccuments Verification ಮಾಡಿದ ನಂತರ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಪ್ರವೇಶ ಶುಲ್ಕ ಭರಿಸಲು ದಿನಾಂಕವನ್ನು ಮಹಾವಿದ್ಯಾಲಯದವರು ನೀಡುವುದು. ಸದರಿ ದಿನಾಂಕದ ಒಳಗಾಗಿ ವಿದ್ಯಾರ್ಥಿಯ ಲಾಗಿನ್‌ದಲ್ಲಿ ಆನ್‌ಲೈನ್ ಮೂಲಕ ಪ್ರವೇಶ ಶುಲ್ಕವನ್ನು ಭರಿಸಿದರೆ ಮಾತ್ರ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಯ ನೊಂದಣಿ ಸಂಖ್ಯೆ ಬರುತ್ತದೆ.

2) ವಿಶ್ವವಿದ್ಯಾಲಯವು ಹೊರಡಿಸಿದ ನಿಯಮಾವಳಿ ಪ್ರಕಾರ ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ ಎಂಬುದನ್ನು ಖಚಿತ ಪಡಿಸಿಕೊಳ್ಳುವುದು ಪ್ರಾಚಾರ್ಯರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ.

3) ಕರ್ನಾಟಕ ಸರ್ಕಾರದಿಂದ ನಡೆಸುವ ಪಿಯುಸಿ ಬೋರ್ಡ್‌ನಿಂದ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಬೇರೆ ವಿಶ್ವವಿದ್ಯಾಲಯ/ರಾಜ್ಯ/ದೇಶದ ಪಿಯುಸಿ (10+2) ಬೋರ್ಡ್‌ನಿಂದ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ಹೊರಡಿಸಿದ ಪ್ರವೇಶದ ನಿಯಮಾವಳಿಗಳ ಪ್ರಕಾರ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡತಕ್ಕದ್ದು. ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರ ಪಡೆದ ನಂತರವೇ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು. ಅಲ್ಲದೇ ಅವರು ವಿಶ್ವವಿದ್ಯಾಲಯದಿಂದ ಪಡೆದ ಅರ್ಹತಾ ಪ್ರಮಾಣ ಪತ್ರ (Eligibility Certificate) ಪಡೆದ ಮಾಹಿತಿಯನ್ನುಅನುಬಂಧದಲ್ಲಿ ತುಂಬಿ ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗಕ್ಕೆ ಕಳುಹಿಸತಕ್ಕದ್ದು. ಈ ಕುರಿತು ಪ್ರವೇಶ ಅರ್ಜಿಯಲ್ಲಿ ಹಾಗೂ ಪರೀಕ್ಷಾ ಪ್ರವೇಶ ಅರ್ಜಿಯಲ್ಲಿ ಸಹ ನಂತರವೇ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು. ಅಲ್ಲದೇ ಅವರು ವಿಶ್ವವಿದ್ಯಾಲಯದಿಂದ ಪಡೆದ ಅರ್ಹತಾ ಪ್ರಮಾಣ ಪತ್ರ (Eligibility Certificate) ಪಡೆದ ಮಾಹಿತಿಯನ್ನುಅನುಬಂಧದಲ್ಲಿ ತುಂಬಿ ವಿಶ್ವವಿದ್ಯಾಲಯದ ವಿದ್ಯಾಮಂಡಳಕ್ಕೆ ಸೂಚಿಸತಕ್ಕದ್ದು. ಸದರಿ ವಿದ್ಯಾರ್ಥಿಗಳ ಪ್ರವೇಶ ಯಾದಿಗೆ ಹಾಗೂ ಪರೀಕ್ಷಾ ಅರ್ಜಿಗಳಿಗೂ ಸಹ ಅರ್ಹತಾ ಪ್ರಮಾಣ ಪತ್ರದ ಒಂದು ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸುವುದು. ಮುಂದುವರೆದು, **ಅರ್ಹತಾ ಪ್ರಮಾಣ ಪತ್ರ ಪಡೆಯದೇ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿದ್ದು ಕಂಡು ಬಂದಲ್ಲಿ ಬಾ.ವಿ.ಸುತ್ತೋಲೆ ಪ್ರಕಾರ, ಪ್ರತಿ ವಿದ್ಯಾರ್ಥಿಗೆ ರೂ, 1,000/- ರಂತೆ ದಂಡವನ್ನು ಮತ್ತು ಸಂಬಂಧಿಸಿದ ಕಾಲೇಜಿನ ಪ್ರಾಚಾರ್ಯರಿಗೆ ಪ್ರತಿ ವಿದ್ಯಾರ್ಥಿಗೆ ರೂ.12,000/- ದಂಡದ ಹಣವನ್ನು ಮತ್ತು ವಿಶ್ವವಿದ್ಯಾಲಯದ ಅರ್ಹತಾ ಪ್ರಮಾಣ ಪತ್ರದ ಶುಲ್ಕ ಆಕರಣೆ ಮಾಡಲಾಗುವುದು.** ಅರ್ಹತಾ ಪ್ರಮಾಣ ಪತ್ರ ಪಡೆಯುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಮೂಲ ಪ್ರಥಮ ಹಾಗೂ ದ್ವಿತೀಯ ವರ್ಷದ ಅಂಕಪಟ್ಟಿಯನ್ನು ಹಾಗೂ ಒಂದು ವರ್ಷಕಿಂತ ಹೆಚ್ಚು ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಮುಂದುವರಿಸುವುದಾದರೆ ಅಂತಹ ವಿದ್ಯಾರ್ಥಿಗಳು ರೂ.20 ಮುಖಬೆಲೆಯ ಬಾಂಡ ಪೇಪರನ್ನು ತೆಗೆದುಕೊಂಡು ನೊಟರಿ ಮಾಡಿಕೊಂಡು ಸಲ್ಲಿಸಬೇಕು ಮತ್ತು ವಿದ್ಯಾರ್ಥಿಯ ಒಂದು ಭಾವಚಿತ್ರ ನೀಡುವುದು.

4) ನೊಂದಣಿ, ವರ್ಗಾವಣೆ, ವಿಷಯ ಬದಲಾವಣೆ ಹಾಗೂ ಇತರೆ ದಂಡ ಶುಲ್ಕವನ್ನು ವಿಶ್ವವಿದ್ಯಾಲಯ ಸೂಚಿಸಿದ ಚಲನ್(General Fund Account ನಲ್ಲಿ) ಮೂಲಕ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಪಾವತಿಸತಕ್ಕದ್ದು. ಒಂದು ವೇಳೆ ಚಲನ್ ಮೂಲಕ ತುಂಬಲು ಅವಕಾಶ ಇಲ್ಲದೆ ಹೋದಲ್ಲಿ, ಅಂಥ ಪ್ರಕರಣಗಳಲ್ಲಿ ಮಾತ್ರ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಡಿ.ಡಿ.ಯನ್ನು ವಿತ್ತಾಧಿಕಾರಿಗಳ ಹೆಸರಿನಲ್ಲಿ ತೆಗೆದು ಸಲ್ಲಿಸುವುದು. ಯಾವುದೇ ಕಾರಣಕ್ಕೂ ಚೆಕ್ ಮುಖಾಂತರ ಹಣ ಪಾವತಿಗೆ ಅವಕಾಶ ಇರುವುದಿಲ್ಲ.

5) ಭಾಷೆ/ಐಚ್ಛಿಕ ವಿಷಯ ಬದಲಾವಣೆ ಪ್ರಸ್ತಾವನೆಗಳನ್ನು ಸಲ್ಲಿಸುವಲ್ಲಿ (1ನೇ ಸೆಮಿಸ್ಟರಗೆ ಮಾತ್ರ) ಪ್ರತಿ ವಿಷಯಕ್ಕೆ ಶುಲ್ಕ ರೂ. **1,500/- (ಒಂದು ಸಾವಿರದ ಐದು ನೂರು ಮಾತ್ರ)** ದೊಂದಿಗೆ ವಿಷಯ ಬದಲಾವಣೆಗಾಗಿ ಹಾಜರಾತಿ ನಿಯಮಗೊಳಪಟ್ಟು ಪ್ರಾಚಾರ್ಯರು ಸೂಕ್ತ ಶಿಫಾರಸ್ಸು ಮಾಡಿ ಶೈಕ್ಷಣಿಕ ವರ್ಷದ ಪ್ರವೇಶಾತಿಯ ಕೊನೆಯ ದಿನಾಂಕದಿಂದ ಒಂದು ವಾರದ ಒಳಗಾಗಿ ವಿಶ್ವವಿದ್ಯಾಲಯಕ್ಕೆ ತಲುಪುವಂತೆ ಸಲ್ಲಿಸತಕ್ಕದ್ದು. ಈ ದಿಶೆಯಲ್ಲಿ ಕನಿಷ್ಠ ಹಾಜರಾತಿ ಪೂರೈಸಿ ಕೊಡುವುದು ಪ್ರಾಚಾರ್ಯರ ಹೊಣೆಯಾಗಿರುತ್ತದೆ. ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಇಂತಹ ಪ್ರಕರಣಗಳಲ್ಲಿ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ ಹಾಗೂ ಸದರಿ ವಿಷಯವನ್ನು ವಿಶ್ವವಿದ್ಯಾಲಯ ಮಟ್ಟದಲ್ಲಿ ವಿಲೇಗೆ ಹಾಕಲಾಗುವುದು.

6) ಕೋರ್ಸನ ವಿನಿಮಯಗಳಂತೆ ಕಡ್ಡಾಯ ವಿಷಯಗಳನ್ನು ಭಾಷಾ ವಿಷಯದಲ್ಲಿ ಒಂದು ಹಾಗೂ ಐಚ್ಛಿಕ ವಿಷಯಗಳ ಅಡಿಯಲ್ಲಿ ಎರಡು ವಿಷಯಗಳನ್ನು ಮಾತ್ರ ಬದಲಾವಣೆ ಮಾಡಲು ಅವಕಾಶವಿರುತ್ತದೆ. ಸದರಿ ಸೌಲಭ್ಯವು ಕೋರ್ಸಿನ ಮೊದಲನೇ ಸೆಮಿಸ್ಟರಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಿರುತ್ತದೆ.

7) ವಿದ್ಯಾರ್ಥಿಯು ಸ್ನಾತಕ ಕೋರ್ಸಿಗೆ (ಸೆಮಿಸ್ಟರ-1ಕ್ಕೆ) ಪ್ರವೇಶ ಪಡೆದು, ಕೋರ್ಸ ಬದಲಾವಣೆ ಮಾಡುವ ಅನಿವಾರ್ಯ ಕಾರಣಗಳಿಂದ ಪ್ರವೇಶ ರದ್ದು ಪಡಿಸಲುಕೋರಿಕೆ ಬಂದಲ್ಲಿ, ಅಂತಹ ವಿದ್ಯಾರ್ಥಿಗಳಿಂದ ಕೋರ್ಸಿನ ಪ್ರವೇಶ ರದ್ಧತಿ ಶುಲ್ಕ **ರೂ. 2000/-**ವಿಶ್ವವಿದ್ಯಾಲಯಕ್ಕೆ ಭರಿಸಿಕೊಂಡು ಪ್ರವೇಶ ರದ್ದು ಪಡೆಸುವಲ್ಲಿ ಅವನ/ಅವಳ ಅರ್ಜಿಯೊಂದಿಗೆ ಸೆಮಿಸ್ಟರ ಸ್ನಾತಕ (ವಿಶ್ವವಿದ್ಯಾಲಯದಿಂದ ನೀಡಿದ) ಮೂಲ ಅಂಕಪಟ್ಟಿ ಹಾಗೂ ಶುಲ್ಕದೊಂದಿಗೆ ವಿಶ್ವವಿದ್ಯಾಲಯದಿಂದ ಪ್ರವೇಶಕ್ಕೆ ನಿಗಧಿಪಡಿಸಿದ ಕೊನೆಯ ದಿನಾಂಕದ ನಂತರ ಒಂದು ವಾರದೊಳಗಾಗಿ, ಅನುಮೋದನೆಗಾಗಿ ಶಿಫಾರಸ್ಸು ಮಾಡಿ ವಿಶ್ವವಿದ್ಯಾಲಯಕ್ಕೆ ಕಳಿಸತಕ್ಕದ್ದು. ಈ ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸದೆ ವಿಲೇಗೆ ಹಾಕಲಾಗುವುದು.

8) ಮುಂದುವರೆದು, ಒಂದು ವೇಳೆ ವಿದ್ಯಾರ್ಥಿಯು ಸೆಮಿಸ್ಟರ ಒಂದರಲ್ಲಿ ಪಾಸಾಗಿ ಶಿಕ್ಷಣವನ್ನು ಆ ಶೈಕ್ಷಣಿಕ ವರ್ಷಕ್ಕೆ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ, 1ನೇ ಸೆಮಿಸ್ಟರನ ಪರೀಕ್ಷಾ ಅರ್ಜಿಯನ್ನು ತುಂಬದೇ, ಪುನಃ ಎರಡನೇ ಸೆಮಿಸ್ಟರಗೆ ಮುಂಬರುವ ಬೇರೆ ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಬಯಸಿದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ನಿಯಮಾನುಸಾರ ಯಾವುದೇ ಅವಕಾಶ ಇರುವುದಿಲ್ಲ. ಕಾರಣ ಇಂತಹ ವಿದ್ಯಾರ್ಥಿಗಳಿಗೆ ಯಾವುದೇ ಹಂತದಲ್ಲಿ ಪ್ರವೇಶ ನೀಡಕೂಡದೆಂದು (2ನೇ ಸೆಮಿಸ್ಟರಗೆ) ಪ್ರಾಚಾರ್ಯರ ಗಮನಕ್ಕೆ ತರಲಾಗಿದೆ. ಈ ಕುರಿತು ಇಂತಹ ಪ್ರಕರಣಗಳಲ್ಲಿ ಸದರಿ ವಿದ್ಯಾರ್ಥಿಗಳ ಹಿಂದೆ ನೋಂದಣಿ ಮಾಡಿದ 1ನೇ ಸೆಮಿಸ್ಟರನ ಪ್ರವೇಶವನ್ನು ನಿಯಮಾನುಸಾರ ವಿಶ್ವವಿದ್ಯಾಲಯದಿಂದ ರದ್ದು ಪಡಿಸುವಲ್ಲಿ ಅನುಮತಿ ಪಡೆದು, ಪುನಃ ಹೊಸದಾಗಿ 1ನೇ ಸೆಮಿಸ್ಟರಗೆ ಪ್ರವೇಶ ನೀಡಲು ಸೂಚಿಸಲಾಗಿದೆ ಹಾಗೂ ಹಿಂದಿನ (1ನೇ ಸೆಮಿಸ್ಟರನ ಮೂಲ ಅಂಕಪಟ್ಟಿ/Performance) ವಿಶ್ವವಿದ್ಯಾಲಯಕ್ಕೆ ಮರಳಿ ಒಪ್ಪಿಸಿ(Surrender)ರದ್ದುಪಡಿಸುವುದು ಅವಶ್ಯಕ.

9) ದ್ವಿತೀಯ ಪಿಯುಸಿ/ತತ್ಸಮಾನ ಹಾಗೂ ಎರಡು ವರ್ಷದ ಪರೀಕ್ಷೆ ಪಾಸಾದ ವಿದ್ಯಾರ್ಥಿಗಳು ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ವರ್ಷಗಳ ನಂತರದ ಅವಧಿಯಲ್ಲಿ ವಿವಿಧ ತರಗತಿಗಳಿಗೆ ಸೆಮಿಸ್ಟರ ಪದ್ಧತಿಯಲ್ಲಿ ಪ್ರವೇಶ ಪಡೆಯುವ ಸಂದರ್ಭದಲ್ಲಿ, ಪ್ರವೇಶ ಪಡೆಯಲು ವಿಳಂಬವಾದ ಬಗ್ಗೆ ಸಂಪೂರ್ಣ ವಿವರ ಪಡೆದು, ಸದರಿ ವಿದ್ಯಾರ್ಥಿಯ “ವರ್ಗಾವಣೆ ಪ್ರಮಾಣ ಪತ್ರ” (T.C) ಪರಿಶೀಲಿಸುವುದರೊಂದಿಗೆ ಹಾಗೂ ಕರ್ನಾಟಕ ಸರ್ಕಾರದಿಂದ ಹೊರಡಿಸುವ ಆದೇಶಗಳಿಗೆ ಬದ್ಧವಾಗಿ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಪ್ರಾಚಾರ್ಯರೇ ಪ್ರವೇಶ ನೀಡುವುದು.

**ವಿಶೇಷ ಸೂಚನೆ:**

- ❖ ಪ್ರವೇಶ ಪಡೆದ ವಿದ್ಯಾರ್ಥಿಗಳ ದಂಡರಹಿತ ಮತ್ತು ದಂಡಸಹಿತ ನೊಂದಣಿ ಶುಲ್ಕದ ಮತ್ತು ಪ್ರವೇಶ ಯಾದಿಯ ವಿವರವಾದ ಮಾಹಿತಿಯನ್ನು ಆಯಾ ಹಂತಕ್ಕೆ ಅನುಸಾರ ನಿಗದಿಪಡಿಸಿದಂತೆ (ಶೈಕ್ಷಣಿಕ ವೇಳಾಪಟ್ಟಿಯಲ್ಲಿ) ಸಿ.ಡಿ.ಯಲ್ಲಿ ಅಳವಡಿಸಿ ಮತ್ತು ಮೂರು ಪ್ರತಿಗಳ ಹಾರ್ಡ್‌ಕಾಪಿಯನ್ನು ವಿಶ್ವವಿದ್ಯಾಲಯಕ್ಕೆ ಖುದ್ದಾಗಿ ಬಂದು ಸಲ್ಲಿಸುವದು.
- ❖ ವಿದ್ಯಾರ್ಥಿಗಳ ಪ್ರವೇಶ ಯಾದಿಯ ಜೊತೆಗೆ ಪ್ರಸ್ತುತ ವರ್ಷದ ಪದವಿ ಮಹಾವಿದ್ಯಾಲಯಕ್ಕೆ ನೀಡಿದ ಮುಂದುವರಿಕೆ ಸಂಯೋಜನಾ ಮಂಜೂರಾತಿ ಅಧಿಸೂಚನೆಯ ಅಥವಾ ಶಾಶ್ವತ ಸಂಯೋಜನೆ ಪಡೆದಿದ್ದಲ್ಲಿ ಅದರ ಅಧಿಸೂಚನೆಯ ಪ್ರತಿಯನ್ನು ದೃಢೀಕರಿಸಿ ಕಡ್ಡಾಯವಾಗಿ ಲಗತ್ತಿಸಿ ಕಳುಹಿಸುವುದು ಮತ್ತು ಪ್ರವೇಶ ಅಧಿಕೃತ ಸೂಚನೆಯ ಪತ್ರವನ್ನು ಲಗತ್ತಿಸುವುದು.
- ❖ ಸ್ನಾತಕ ಕೋರ್ಸುಗಳ ವಿದ್ಯಾರ್ಥಿಗಳ ಪ್ರವೇಶಯಾದಿಯಲ್ಲಿ ನಮೂದಿಸಿದ ಅನುಕ್ರಮ ಸಂಖ್ಯೆಯ ಪ್ರಕಾರ ಪರೀಕ್ಷಾ ಅರ್ಜಿಗಳನ್ನು ತುಂಬಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು.
- ❖ ಸ್ನಾತಕ, ಕೋರ್ಸಿನ ಪ್ರವೇಶ ನಿಯಮಾವಳಿಗಳ ಕೈಪಿಡಿಯಲ್ಲಿರುವ ಅನುಬಂಧಗಳನ್ನು ವಿದ್ಯಾಮಂಡಳ (Academic) ವಿಭಾಗಕ್ಕೆ ಕಳುಹಿಸಬೇಕು ಹಾಗೂ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವ ನಮೂನೆಯನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಬೇಕು.
- ❖ ಕೋರ್ಸುವಾರು ಎಲ್ಲಾ ವಿದ್ಯಾರ್ಥಿಗಳ ಪ್ರವೇಶ ನೀಡುವ ಸಂದರ್ಭದಲ್ಲಿ ತಮ್ಮ ಪದವಿ ಮಹಾವಿದ್ಯಾಲಯದಿಂದ ವಿದ್ಯಾರ್ಥಿಗಳಿಗೆ ನೀಡಿದ ಒಟ್ಟಾರೆ ಎಲ್ಲ ಶುಲ್ಕಗಳ ದೃಢೀಕೃತ ಪ್ರತಿಗಳನ್ನು ಪ್ರವೇಶಯಾದಿಯ ಜೊತೆಗೆ ಕಡ್ಡಾಯವಾಗಿ ಲಗತ್ತಿಸಿ ಕಳುಹಿಸುವುದು.
- ❖ ಪದವಿ ಕೋರ್ಸುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಯಾದಿಯನ್ನು ಬಾಗಲಕೋಟ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಾಗ (ಆಯಾ ಪದವಿ ತರಗತಿಗೆ ಸಂಬಂಧಿಸಿದ ಶೈಕ್ಷಣಿಕ ವೇಳಾ ಪಟ್ಟಿಯಲ್ಲಿ ತಿಳಿಸಿದಂತೆ) ಈ ಕೆಳಗೆ ಉದಾಹರಣೆ (Example) ನೀಡಿದಂತೆ Abstract ನಲ್ಲಿ ಮಾಹಿತಿಯನ್ನು ಕಡ್ಡಾಯವಾಗಿ ಒದಗಿಸುವುದು.

**<u>ಉದಾಹರಣೆ (Example):</u>**Name of the College: ____________Intake of the College Code (Course wise)___________

**ABSTRACT**

| Sl. No. | Name of the course | Category wise | Reg. Fees | No. of Students admitted | Total Fees Collected |
|---|---|---|---|---|---|
| 1. | B.A. | GM/OBC<br>SC/ST/Cat-I<br>FINE<br>FINE | Rs.1250 x<br>Rs.1170 x<br>Rs. 750 x<br>Rs. 1500 x | 50<br>50<br>10<br>5 | Rs.62500-00<br>Rs.58500-00<br>Rs. 7500-00<br>Rs. 7500-00 |
| 2. | BBA. | GM/OBC<br>SC/ST/Cat-I<br>FINE<br>FINE | Rs.3050 x<br>Rs.2970 x<br>Rs.750 x<br>Rs. 1500 x | 50<br>50<br>10<br>5 | Rs.152500-00<br>Rs.148500-00<br>Rs. 7500-00<br>Rs. 7500-00 |
| Signature of the Principal<br>With Seal | | | | | |

**ವಿಶೇಷ ಸೂಚನೆಯಲ್ಲಿ ತಿಳಿಸಿದ ಪ್ರಕಾರ ನಿಯಮಗಳನ್ನು ಪಾಲಿಸದಿದ್ದಲ್ಲಿ ಅಥವಾ ಸೂಚಿಸಿದ ಪ್ರಕಾರ ಸಂಬಂಧಿಸಿದ ದಾಖಲಾತಿಗಳನ್ನು ವಿದ್ಯಾರ್ಥಿಗಳ ಪ್ರವೇಶಯಾದಿಯ ಜೊತೆಗೆ ಲಗತ್ತಿಸಿ ಕಳುಹಿಸದಿದ್ದಲ್ಲಿ ವಿದ್ಯಾರ್ಥಿಗಳ ಪ್ರವೇಶಯಾದಿಯನ್ನು ಅನುಮೋದನೆ ಮಾಡಲಾಗುವುದಿಲ್ಲ ಹಾಗೂ ಮುಂದೆ ಆಗುವ ತೊಂದರೆಗಳಿಗೆ ಪ್ರಾಚಾರ್ಯರೇ ಹೊಣೆಗಾರರು.**

**<u>ಟಿಪ್ಪಣಿ:</u> ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ಸಮಸ್ಯೆ ಇದ್ದಲ್ಲಿ, ಆಯಾ ಸಂಬಂಧಿಸಿದ ಪದವಿ ಕೋರ್ಸುಗಳ ನಿಯಮಗಳ ಪ್ರಕಾರ ಸರಿಯಾಗಿ ಮಾರ್ಗದರ್ಶನ ನೀಡಿ ಅವರ ಸಮಸ್ಯೆಗಳನ್ನು ಪರಿಗಣಿಸತಕ್ಕದ್ದು.**

<u>ಸದರಿ ಸ್ನಾತಕ ಕೋರ್ಸಿನ ಪ್ರವೇಶ ನಿಯಮಾವಳಿಗಳ ಪ್ರತಿ ಪುಟವನ್ನು ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚನಾ ಫಲಕಕ್ಕೆ ಕಡ್ಡಾಯವಾಗಿ ಲಗತ್ತಿಸಬೇಕು.</u>

ಈ ಮೇಲ್ಕಾಣಿಸಿದ ನಿಯಮಗಳಿಗನುಸಾರ ಪ್ರವೇಶ ಪ್ರಕ್ರಿಯೆ ಪೂರೈಸಬೇಕಾದ ಹಿನ್ನಲೆಯಲ್ಲಿ ಇವುಗಳ ವ್ಯತಿರಿಕ್ತ ಕ್ರಮ ಜರುಗದಂತೆ ಪ್ರಾಚಾರ್ಯರು ಗಮನ ನೀಡಬೇಕು. ಯಾವುದೇ ಪ್ರಸಂಗದಲ್ಲಿ ವಿಶ್ವವಿದ್ಯಾಲಯದ ನಿರ್ಣಯ ಅಂತಿಮವಾಗಿರುತ್ತದೆ.

**ಕುಲಸಚಿವರು**

**<u>ಅಡಕಗಳು ಮೇಲಿನಂತೆ:</u>**

**ಇವರಿಗೆ,**

ಪ್ರಾಚಾರ್ಯರು, ಬಾಗಲಕೋಟ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಯೋಜಿತ ಪದವಿ ಮಹಾವಿದ್ಯಾಲಯಗಳು ಜಮಖಂಡಿ,

**<u>ಪ್ರತಿ ಸಾದರಪೂರ್ವಕವಾಗಿ:</u>**

1. ಕುಲಸಚಿವರು (ಮೌಲ್ಯಮಾಪನ) ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ.
2. ವಿತ್ತಾಧಿಕಾರಿಗಳು, ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ
3. ಉಪಕುಲಸಚಿವರು, ಕುಲಸಚಿವರ ಕಾರ್ಯಾಲಯ, ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ.
4. ನಿರ್ದೇಶಕರು, ಕಾಲೇಜುಅಭಿವೃದ್ಧಿ ಮಂಡಳಿ, ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ.
5. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟ ಜಿಲ್ಲೆ, ಬಾಗಲಕೋಟ.
6. ರಕ್ಷಾ ಪ್ರತಿ.

# ಬಾಗಲಕೋಟ ವಿಶ್ವವಿದ್ಯಾಲಯ,

## ಜಮಖಂಡಿ

# ವಿದ್ಯಾಮಂಡಳ ವಿಭಾಗದಿಂದ

# 2023-24 ನೇ ಶೈಕ್ಷಣಿಕ ಸಾಲಿಗಾಗಿ ಹೊರಡಿಸಿದ

# ಸುತ್ತೋಲೆಗಳು

ಅನುಬಂಧ – 4

# ಬಾಗಲಕೋಟ ವಿಶ್ವವಿದ್ಯಾಲಯ

(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
**ಮುಧೋಳ ರಸ್ತೆ, ಜಮಖಂಡಿ–587301 ಬಾಗಲಕೋಟೆ ಜಿಲ್ಲೆ**

## Bagalkot University

(A State Public University of Govt. of Katakana)
Mudhol Road, Jamkhandi-587301 Dist: Bagalkote

